# ಹಂಪಿ ಟೈಮ್ಸ್

HAMPI TIMES

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

ಕನ್ನಡ ದಿನಪತ್ರಿಕೆ
KANNADA DAILY








ಸಂಪುಟ:01 • ಸಂಚಿಕೆ:324 • ನೋಂದಣಿ ನಂ.:KARKAN27911 • ವಿಜಯನಗರ • 26.05.2024 • ಭಾನುವಾರ • ಪುಟ:04 • ಬೆಲೆ:2

Volume:01 • Issue:324 • Reg.No:KARKAN27911 • VIJAYANAGARA • 26.05.2024 • Sunday • Page:04 • Rs:2



ಮಕ್ಕಳ ಜ್ಞಾನ ವಿಕಾಸಕ್ಕೆ
ಮನೆಗೊಂದು ಕನ್ನಡ ದಿನಪತ್ರಿಕೆ ಇರಲಿ


**ಮೈಕ್ರೋ ನ್ಯೂಸ್**

## ಕಾನೂನು ಎಲ್ಲರಿಗೂ ಒಂದೇ: ಮುಖ್ಯಮಂತ್ರಿ ಸಿದ್ದರಾಮಯ್ಯ

**ಮಂಗಳೂರು:** ಶಾಸಕ ಹರೀಶ್ ಪೂಂಜಾ ಪೊಲೀಸರಿಗೆ ಬೆದರಿಕೆ ಹಾಕಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಐಪಿಸಿ 353ರ ಪ್ರಕಾರ ಎಫ್ ಐ ಆರ್ ನ್ನು ದಾಖಲಿಸಲಾಗಿದ್ದು, ಕಾನೂನು ಎಲ್ಲರಿಗೂ ಒಂದೇ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು. ಮಂಗಳೂರಿನ ಅಂತರರಾಷ್ಟ್ರೀಯ ವಿಮಾನ ನಿಲ್ದಾನದಲ್ಲಿ ಮಾಧ್ಯಮದವ ರೊಂದಿಗೆ ಶನಿವಾರ ಮಾತನಾಡಿದರು. ಬಿಜೆಪಿ ಶಾಸಕ ಹರೀಶ್ ಪೂಂಜಾ ಅವರ ಬಂಧನಕ್ಕೆ ಕಾಂಗ್ರೆಸ್ ಒತ್ತಡ ಹೇರುತ್ತಿದೆ ಎಂಬ ಪ್ರತಿಪಕ್ಷಗಳ ಆರೋಪಕ್ಕೆ ಸಂಬಂಧಿಸಿದಂತೆ ಪ್ರತಿಕ್ರಿಯೆ ನೀಡಿ, ಕಾನೂನು ಎಲ್ಲರಿಗೂ ಒಂದೇ. ಐಪಿಸಿ 353ರ ಪ್ರಕಾರ ಎಫ್ ಐ ಆರ್ ನ್ನು ದಾಖಲಿಸಲಾಗಿದ್ದು, ಅದು ಜಾಮೀನು ರಹಿತ ಅಪರಾಧವಾಗಿರುತ್ತದೆ. ಈ ಕಾನೂನಿನಂತೆ 7 ವರ್ಷ ಜೈಲುವಾಸದ ಶಿಕ್ಷೆ ನೀಡುವ ಅವಕಾಶವಿದೆ. ಆದರೆ ಹರೀಶ್ ಪೂಂಜಾ ಅವರು ಶಾಸಕರೆಂದ ಮಾತ್ರಕ್ಕೆ ಅವರ ಮೇಲಿನ ಆರೋಪವನ್ನು ಅಲ್ಲಗೆಳೆಯಲು ಸಾಧ್ಯವೇ ಎಂದರು. ಪೊಲೀಸರ ಮೇಲೆ ಬೆದರಿಕೆ ಹಾಕಿರುವ 2 ಪ್ರಕರಣಗಳು ಅವರ ಮೇಲೆ ದಾಖಲಾಗಿದೆ. ಶಾಸಕರಾದರೆ ಪೊಲೀಸರ ಮೇಲೆ ಬೆದರಿಕೆ ಹಾಕಬಹುದೇ ಎಂದು ಮುಖ್ಯಮಂತ್ರಿಗಳು ಮರುಪ್ರಶ್ನಿಸಿದರು.

# ನರೇಗಾ ಗೈರಾದವರಿಗೆ ಕೂಲಿ ಪಾವತಿಸಿದರೆ ಕ್ರಮ ಗ್ಯಾರಂಟಿ

### ಸಿಇಓ ಸದಾಶಿವ ಪ್ರಭು ಖಡಕ್ ಎಚ್ಚರಿಕೆ | ನರೇಗಾ ಕೂಲಿ ಕಾರ್ಮಿಕರು ಉಂಡು ಕೆಲಸ ನಿರ್ವಹಿಸಲು ಸಲಹೆ

■ **ಹಂಪಿ ಟೈಮ್ಸ್ ಹೊಸಪೇಟೆ**

ನರೇಗಾ ಕೂಲಿ ಕಾರ್ಮಿಕರು ಬೆಳಗ್ಗೆ ನರೇಗಾ ಕೂಲಿ ಕೆಲಸಕ್ಕೆ ಬರುವಾಗ ಹಸಿದ ಹೊಟ್ಟೆಯಲ್ಲಿ ಬರದೇ ಊಟ ಅಥವಾ ತಿಂಡಿ ತಿಂದು ಕೆಲಸ ನಿರ್ವಹಿಸಬೇಕು ಎಂದು ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಸದಾಶಿವ ಪ್ರಭು ಬಿ ಸಲಹೆ ನೀಡಿದರು.

ಹಗರಿಬೊಮ್ಮನಹಳ್ಳಿ ತಾಲೂಕಿನ ಹಲಗಾಪುರ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗುಳೇದಾಳ್ ಕೆರೆಯಲ್ಲಿ ಹೂಳು ತೆಗೆಯಲು ಬಂದಿದ್ದ ಕೂಲಿ ಕಾರ್ಮಿಕರನ್ನು ಉದ್ದೇಶಿಸಿ ಶನಿವಾರ ಮಾತನಾಡಿದರು. ಸರಕಾರ ನಿಗದಿಪಡಿಸಿದ ರೀತಿಯಲ್ಲಿ ಪ್ರತಿಯೊಬ್ಬರಿಗೆ ಪೂರ್ಣ ಕೂಲಿ ಲಭ್ಯವಾಗಬೇಕಿದೆ ಈ ನಿಟ್ಟಿನಲ್ಲಿ ಗೈರು ಹಾಜರಿ ಆದವರ ಹೆಸರಿನಲ್ಲಿ ಕೂಲಿ ಪಾವತಿ ಮಾಡದಂತೆ ನೀವು ಗಮನಿಸಬೇಕು ಇದರಿಂದಾಗಿ ಶ್ರಮಪಡದೆ ಕೂಲಿಯ ಹಣ ಬೇರೆಯವರಿಗೆ ತಲುಪುವುದು ತಪ್ಪಿ ನಿಜವಾಗಿಯೂ ಹಾಜರಾಗಿ ಕೆಲಸ ಮಾಡುವ ಕಾರ್ಮಿಕರಿಗೆ ಸಂಪೂರ್ಣ ಕೂಲಿ ಸಿಗುತ್ತದೆ ಎಂದರು.





ಕಾರ್ಮಿಕರ ಗೈರು ಹಾಜರಿಯನ್ನು ಖಾಲಿ ಬಿಡದೆ ಕಡ್ಡಾಯವಾಗಿ ಭೌತಿಕ ಪ್ರತಿಯಲ್ಲಿ ನಮೂದಿಸಬೇಕು ನಂತರ ಎನ್‌ಎಂಎಂಎಸ್ ನಲ್ಲಿ ಅದೇ ರೀತಿ ದಾಖಲಿಸುವಂತೆ ನೋಡಿಕೊಳ್ಳಬೇಕು ಈ ಕುರಿತು ಕಾಮಗಾರಿ ಸ್ಥಳಕ್ಕೆ ನಿರಂತರವಾಗಿ ಭೇಟಿ ನೀಡಿ ಪರಿಶೀಲಿಸುವಂತೆ ಸ್ಥಳದಲ್ಲಿ ಹಾಜರಿದ್ದ ಹಗರಿಬೊಮ್ಮನಹಳ್ಳಿ ತಾಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ಹಾಗು ನರೇಗಾ ಸಹಾಯಕ ನಿರ್ದೇಶಕರಿಗೆ ತಿಳಿಸಿದರು. ಕೂಲಿ ಕಾರ್ಮಿಕರ ತಲೆ ಎಣಿಕೆ ಮತ್ತು ಹಾಜರಿ ಸರಿಯಾಗಿರುವುದರ ಸ್ಥಳೀಯ ಬಿ ಎಫ್ ಟಿ ಗಳು ಖಾತ್ರಿಪಡಿಸಿಕೊಳ್ಳಬೇಕು, ಮೇಲಾಧಿಕಾರಿಗಳ ಪರಿಶೀಲನೆ ಸಂದರ್ಭದಲ್ಲಿ ವ್ಯತ್ಯಾಸ ಕಂಡು ಬಂದಲ್ಲಿ ನೇರವಾಗಿ ಬಿ ಎಫ್ ಟಿಗಳ ಮೇಲೆ ನಿರ್ಧಾಕ್ಷಿಣ್ಯ ಕ್ರಮಕೈಗೊಳ್ಳುವುದಲ್ಲದೇ ಮೇಟಿಗಳನ್ನು ತೆಗೆದುಹಾಕಲಾಗುವುದು ಎಂದು ಕಟ್ಟುನಿಟ್ಟಿನ ಸೂಚನೆ ನೀಡಿದರು. ಭೌತಿಕ ಹಾಜರಾತಿ ಪ್ರತಿಯನ್ನು ಮೇಟಿಯಿಂದ ಪಡೆದು ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗಳೇ ಜೋರಾಗಿ ಓದುವುದರ ಮೂಲಕ ಹಾಜರಾತಿ ಪರಿಶೀಲನೆ ನಡೆಸಿ ಗೈರು ಆಗಿರುವ ಕಾರ್ಮಿಕರನ್ನು ಗೈರುಹಾಜರಿ ಎಂದು ನಮೂದಿಸದೇ ಖಾಲಿ ಬಿಟ್ಟಿದ್ದನ್ನು ಗಮನಿಸಿದ ಅವರು ಮೇಟಿಯನ್ನು ತರಾಟೆಗೆ ತೆಗೆದುಕೊಂಡು ಕೂಡಲೇ >>4

# ಸಿ.ಎಸ್.ಆರ್.ನಿಧಿ ಬಳಸಿ ಶಾಲೆಗಳಲ್ಲಿ ಸೌಕರ್ಯ ಕಲ್ಪಿಸಿ : ಡಿಸಿ ಅತುಲ್



■ **ಹಂಪಿ ಟೈಮ್ಸ್ ಕೊಪ್ಪಳ**

ಸಿ.ಎಸ್.ಆರ್. ನಿಧಿ ಬಳಸಿ ಶಾಲೆಗಳಲ್ಲಿ ಅಗತ್ಯ ಮೂಲಭೂತ ಸೌಕರ್ಯ ಕಲ್ಪಿಸುವಂತೆ ಜಿಲ್ಲಾಧಿಕಾರಿಗಳಾದ ನಲಿನ್ ಅತುಲ್ ಅವರು ಹೇಳಿದರು.

2024-25ನೇ ಸಾಲಿನಲ್ಲಿ ಕೈಗೊಳ್ಳುವ ಕಾರ್ಯಕ್ರಮಗಳ ವಿವರದ ಕುರಿತು ಕ್ರಿಯಾ ಯೋಜನೆ ಕುರಿತು ಜಿಲ್ಲಾ ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ಅಧಿಕಾರಿಗಳು ಹಾಗೂ ಜಿಲ್ಲೆಯ ವಿವಿಧ ಕಂಪನಿ ಮುಖ್ಯಸ್ಥರೊಂದಿಗೆ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಸಿ.ಎಸ್.ಆರ್. ನಿಧಿ ಬಳಸಿ ಅವಶ್ಯವಿರುವ ಶಾಲೆಗಳಲ್ಲಿ ಹೆಚ್ಚಿನ ಕೊಠಡಿಗಳು, ಪ್ರಯೋಗಾಲಯ, ವೃತ್ತಿ ಶಿಕ್ಷಣ, ಸುಸಜ್ಜಿತ ಶೌಚಾಲಯ ಮೂಲಭೂತ ಸೌಕರ್ಯ ಕಲ್ಪಿಸಿ, ಅಂತಹ ಶಾಲೆಗಳನ್ನು ಅಭಿವೃದ್ಧಿ ಮಾಡಲಾಗುವುದು. ಹೆಚ್ಚಿನ ವಿದ್ಯಾರ್ಥಿಗಳು ಇರುವ ಶಾಲೆಗಳನ್ನು ಮೇಲ್ದರ್ಜೆಗೇರಿಸಲು ಆಯ್ಕೆ ಮಾಡಲಾಗುವುದು. ಇದಲ್ಲದೇ ಈ ಅನುದಾನದಲ್ಲಿ ವಿದ್ಯಾರ್ಥಿಗಳಿಗೆ ಕಲಿಕಾ ಸಾಮಗ್ರಿಗಳ ವಿತರಣೆ, ಬರ ಸಮಯದಲ್ಲಿ ಕುಡಿಯುವ ನೀರಿನ ಪೂರೈಕೆ, ರಸ್ತೆಗಳ ದುರಸ್ತಿ ಹೀಗೆ ಇತರ ಸಾಮಾಜಿಕ ಸೇವಾ ಕಾರ್ಯಗಳನ್ನು ಕೈಗೊಳ್ಳಬೇಕು. ಈ ಹಿನ್ನೆಲೆಯಲ್ಲಿ ಎಲ್ಲಾ ಕಂಪನಿಗಳು ಸಹಕರಿಸಬೇಕು ಎಂದರು.

2022-23, 2023-24 ನೇ ಸಾಲಿನಲ್ಲಿ ಸಿ.ಎಸ್.ಆರ್. ಅನುದಾನ ಅಡಿಯಲ್ಲಿ ಕೈಗೊಂಡ ಕಾರ್ಯಕ್ರಮಗಳ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು. ಸಭೆಯಲ್ಲಿ ಜಿಲ್ಲಾ ಕೈಗಾರಿಕಾ ಕೇಂದ್ರದ ಜಂಟಿ ನಿರ್ದೇಶಕರಾದ ಎಸ್.ಎಂ.ಚವ್ಹಾಣ, ಜಿಲ್ಲಾಧಿಕಾರಿ ಕಚೇರಿಯ ಶಿರಸ್ತೇದಾರ ಶಿವಕುಮಾರ ಸೇರಿದಂತೆ ಕೊಪ್ಪಳ ಜಿಲ್ಲೆಯ ಕಂಪನಿಗಳಾದ ಕಿರ್ಲೋಸ್ಕರ್, ಕಲ್ಯಾಣಿ, ಮುಕುಂದ ಸುಮಿ, ಎಂ.ಎಸ್. ಮೆಟಲ್, ಕಾಮಿನಿ ಐರನ್, ಭದ್ರಶ್ರೀ, ವನ್ಯ ಸ್ಟೀಲ್, ಧ್ರುವ ದೇಶ, ಪಿಬಿಎಸ್, ಕೊರಮಂಡಲ ಇಂಟರ್‌ನ್ಯಾಷನಲ್ ಲಿ., ಎಂ.ಎಸ್.ಪಿ.ಎಲ್. ಮುಂತಾದ ಕಂಪನಿ ಮುಖ್ಯಸ್ಥರು ಹಾಗೂ ಮತ್ತಿತರರು ಉಪಸ್ಥಿತರಿದ್ದರು.




ಹಂಪಿ ಟೈಮ್ಸ್ ಸಂ|ಪಾ|ದ|ಕೀ|ಯ

# ಕಾನೂನು ಕ್ರಮ ಬಿಗಿಯಾಗಲಿ ಅಪರಾಧ ಪ್ರಕರಣಗಳು ನಿಲ್ಲಲಿ

ಕರ್ನಾಟಕದಲ್ಲಿ ಅಪರಾಧ ಪ್ರಕರಣಗಳು ದಿನೇದಿನೇ ಹೆಚ್ಚುತ್ತಿವೆ. ಇದು ನಿಜವಾಗಿಯೂ ಆತಂಕದ ವಿಚಾರವೇ ಸರಿ. ಮಾಧ್ಯಮಗಳಲ್ಲಿ ಅಪರಾಧ ಸುದ್ದಿಗಳು ಪ್ರಕಟವಾಗದ ದಿನವೇ ಇಲ್ಲ ಎಂಬಷ್ಟರ ಮಟ್ಟಿಗೆ ವಾತಾವರಣ ನಿರ್ಮಾಣವಾಗಿದೆ. ನೇಹಾ ಹಿರೇಮಠ ಕೊಲೆ ಪ್ರಕರಣ ಇನ್ನೂ ಮರೆಯಾಗುವ ಮುನ್ನವೇ ಮತ್ತೊಂದು ಕೊಲೆ ನಡೆದಿದೆ. ಅದೂ ಅದೇ ಊರಲ್ಲಿ. ಅಂಜಲಿ ಎಂಬ ಯುವತಿಯನ್ನು ಕೊಲೆ ಮಾಡಲಾಗಿದೆ. ನೇಹಾ ಕೊಲೆ ಪ್ರಕರಣ ಇಡೀ ದೇಶವನ್ನೇ ಗಮನ ಸೆಳೆದಿತ್ತು. ಈಗ ಅಂಜಲಿ ಕೊಲೆ ಪ್ರಕರಣವೂ ಸಾಕಷ್ಟು ಸುದ್ದಿಯಾಗುತ್ತಿದೆ. ಪ್ರತಿನಿತ್ಯವೂ ಕೊಲೆ, ಅತ್ಯಾಚಾರ, ಸುಲಿಗೆ, ಕಳವು, ಮತ್ತಿತರ ಗಂಭೀರ ಅಪರಾಧ ಪ್ರಕರಣಗಳು 'ಇದು ಸಾಮಾನ್ಯ' ಎಂಬಂತಾಗಿರುವುದು ಆತಂಕವೇ ಸರಿ. ನೇಹಾಳನ್ನು ಹಾಡಹಗಲೇ ಹತ್ಯೆ ಮಾಡಿದ ಘಟನೆ ಇನ್ನೂ ಹಸಿಹಸಿಯಾಗೇ ಇದೆ. ಈಗ ಅದೇ ಊರಲ್ಲಿ ಅಂಜಲಿ ಹೆಸರಿನ ಯುವತಿಯ ಮನೆಗೆ ನುಗ್ಗಿ ವಿಕೃತಿ ಮನಸಿನ ಯುವಕ ಕೊಲೆ ಮಾಡಿದ್ದಾನೆ. ಇದು ಕೇವಲ ಹುಬ್ಬಳ್ಳಿಯ ಕತೆಯಲ್ಲ. ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಇಂಥ ಪ್ರಕರಣಗಳು ನಡೆಯುತ್ತಲೇ ಇವೆ. ಕೆಲವೊಂದು ಬೆಳಕಿಗೆ ಬರುತ್ತವೆ, ಕೆಲವೊಂದು ದೊಡ್ಡ ಸುದ್ದಿಯೇ ಆಗುವುದಿಲ್ಲ. ಒಂದು ಕೊಲೆ ಪ್ರಕರಣ ಇಡೀ ರಾಜ್ಯದ ಗಮನ ಸೆಳೆದರೆ, ಮತ್ತೊಂದು ಕೊಲೆ ಪ್ರಕರಣ ಮೊದಲಿನ ಹತ್ಯ ಘಟನೆಯನ್ನು ಮರೆಸುತ್ತದೆ.




ಒಂದು ಮಾಹಿತಿ ಪ್ರಕಾರ 2022ರಿಂದ 2024ರ ಏಪ್ರಿಲ್‌ವರೆಗೆ ಕರ್ನಾಟಕದಲ್ಲಿ 3095 ಕೊಲೆಗಳು ವರದಿಯಾಗಿವೆ ಎಂದರೆ ನಂಬಲೇಬೇಕು. ಅದರಲ್ಲೂ 2024ರಲ್ಲಿ ಆರಂಭದ ನಾಲ್ಕೈದು ತಿಂಗಳಲ್ಲೇ 430 ಕೊಲೆ, 1262 ಮಕ್ಕಳ ಮೇಲೆ ಲೈಂಗಿಕ ದೌರ್ಜನ್ಯ, 198 ಅತ್ಯಾಚಾರ ನಡೆದಿವೆ ಎಂದು ಅದೇ ಸಮೀಕ್ಷೆ ಮಾಹಿತಿ ನೀಡಿರುವುದು ನೋಡಿದರೆ ಕರ್ನಾಟಕ ಎಲ್ಲಿಗೆ ಬಂದು ನಿಂತಿದೆ ಮತ್ತು ಇದು ಎಲ್ಲಿಗೆ ಕರೆದೊಯ್ಯುತ್ತದೆ ಎಂಬ ಆತಂಕ ಶುರುವಾಗುತ್ತದೆ. ಇಷ್ಟೂ ಪ್ರಕರಣಗಳು ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವಂಥದು. ಇನ್ನು ಠಾಣೆಯಲ್ಲಿ ದೂರು ದಾಖಲಾಗದೆ ಹಲವು ಅಪರಾಧಗಳು ನಡೆಯುತ್ತಲೇ ಇವೆ. ಇದೆಲ್ಲವನ್ನೂ ಗಮನಿಸಿದರೆ ಅಪರಾಧಿಗಳಿಗೆ ಯಾರ ಭಯವೇ ಇಲ್ಲವೇನೋ ಎಂದೆನಿಸುತ್ತದೆ. ಈಗೇನಿದ್ದರೂ ಸೋಷಿಯಲ್ ಮಿಡಿಯಾ ಜಗತ್ತು. ಎಲ್ಲೇ ಅಪರಾಧ ನಡೆದರೂ ಕೆಲ ನಿಮಿಷಗಳಲ್ಲೇ ಫೋಟೋ ಅಥವಾ ವಿಡಿಯೋ ಸಮೇತ ಸುದ್ದಿ ಅಥವಾ ಮಾಹಿತಿ ಜನರ ಕೈಯಲ್ಲಿ ಇರುತ್ತದೆ. ಈಗ ನೇಹ ಮತ್ತು ಅಂಜಲಿ ಕೊಲೆ ಪ್ರಕರಣಗಳನ್ನೇ ತೆಗೆದುಕೊಳ್ಳಿ. ಈ ಕೊಲೆ ಘಟನೆಯನ್ನು ನೋಡಿದರೆ ನಮ್ಮ ಮಕ್ಕಳನ್ನು ಹೊರಗೆ ಕಳಿಸುವುದು ಎಷ್ಟು ಕ್ಷೇಮ ಎಂಬ ಅನುಮಾನ ಬಾರದೇ ಇರದು. ಅಷ್ಟರ ಮಟ್ಟಿಗೆ ಈ ಪ್ರಕರಣಗಳು ನಮ್ಮ ಮನಸ್ಸನ್ನು ಘಾಸಿಗೊಳಿಸಿವೆ. ಅಪರಾಧಿಗಳಿಗೆ ಎಂಥ ಶಿಕ್ಷೆಯಾಗಬೇಕು ಎಂದರೆ ಭವಿಷ್ಯದಲ್ಲಿ ಕೃತ್ಯ ಎಸಗುವವರು ಹೆದರುವಂತಾಗಬೇಕು. ಅಷ್ಟರ ಮಟ್ಟಿಗೆ ಕಾನೂನು ಕ್ರಮ ಬಿಗಿಯಾಗಬೇಕು. ಪೊಲೀಸರೆಂದರೆ ಅಪರಾಧಿಗಳು ಹೆದರುವಂತಾಗಬೇಕು. ಪೊಲೀಸರ ಉತ್ತಮ ಕಾರ್ಯಗಳಿಗೆ ಮತ್ತಷ್ಟು ವೇಗ ಸಿಗಬೇಕು.

ಹಂಪಿ ಟೈಮ್ಸ್
ಕನ್ನಡ ಡಿಂಡಿಮ ಎಲ್ಲೆಡೆ
DIGITAL NEWS
NOW You can read
Kannada News in English, Hindi, Telugu, Marathi, Tamil, Malayalam, Arabic, Dutch, French, Italian, Portuguese & Russian, German Languages
www.hampitimes.com
HAMPI TIMES

## ನೀವೂ ಬರೆಯಬಹುದು

**ಹಂಪಿ ಟೈಮ್ಸ್** ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

**ಬೆಳಕಿನ ಹಾದಿ:** ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**ಸಂಪಾದಕರು:** ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.
ಇ–ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

– ಜಾಹೀರಾತು ವ್ಯವಸ್ಥಾಪಕರು.

# ಬಣಗಾರ ಕಣ್ಣೋಟದ ಹಂಪಿಯ ಪ್ರತಿಬಿಂಬಗಳು



ಮುಂಗಾರು ಮಳೆಯೇ ಏನು ನಿನ್ನ ಹನಿಗಳ ಲೀಲೆ
ನಿನ್ನ ಮುಗಿಲ ಸಾಲೆ ಧರೆಯ ಕೊರಳ ಪ್ರೇಮದ ಮಾಲೆ
ಸುರಿವ ಒಲುಮೆಯಾ ಜಡಿ ಮಳೆಗೆ ಪ್ರೀತಿ ಮೂಡಿದೆ...........

ಎನ್ನುವ ಜಯಂತ್ ಕಾಯ್ಕಿಣಿಯವರ ಕವನದ ಸಾಲುಗಳನ್ನು ಗುನಗದವರಿಲ್ಲ. ಮಳೆ ಅಂದರೆ ನಿರೀಕ್ಷೆ, ಸಂಭ್ರಮ, ಮುಗಿಲ ತುಂಬಾ ಮೋಡಗಳು ಕಾಮನಬಿಲ್ಲು ಗುಡುಗು ಸಿಡಿಲು ಮಿಂಚು ಗಾಳಿ ಬಿರುಗಾಳಿ ಮಳೆ ಜಡಿ ಮಳೆ ಹೀಗೆ ಮುಂಗಾರಿನ ಮಳೆ ಬೀಳುತ್ತಿದ್ದರೆ ಗರಿಗೆದರಿದ ರೈತರ ಉಳಿಮೆ ಬಿತ್ತನೆಯ ಉತ್ಸಾಹ ಮಣ್ಣಿನ ವಾಸನೆ. ಮನುಷ್ಯರಿಗೆ ಅಷ್ಟೇ ಅಲ್ಲ ಸಕಲ ಜೀವರಾಶಿಗಳಿಗೂ ಮೊದಲ ಮಳೆ ತಂಪೆರೆದಾಗ ಆಗುವ ಆನಂದ ಅಷ್ಟಿಷ್ಟಲ್ಲ. ಕಾದ ಹಂಚಿನಂತಾದ ಧರೆಗೆ ಮುಂಗಾರಿನ ಮಳೆ ತಂಪೆರೆದಾಗ ಮನುಷ್ಯ, ಪ್ರಾಣಿ ಪಕ್ಷಿಗಳಷ್ಟೇ ಅಲ್ಲ, ಕಾದು ಬಸವಳಿದ ಹಂಪಿಯ ಸ್ಮಾರಕಗಳು ಸಹ ತಂಪೆರದ ಮುಂಗಾರಿನ ಮಳೆಗೆ ಪುಲಕ ಗೊಳ್ಳುತ್ತವೆ ಅನಿಸುತ್ತದೆ. ಮರ ಗಿಡಗಳಂತೆ ಅವುಗಳು ಸಹ ಜೀವಕಳೆಯನ್ನು ತುಂಬಿಕೊಳ್ಳುತ್ತವೆ. ಈ ಮುಂಗಾರಿನ ಸಂದರ್ಭದಲ್ಲಿ ಮುಂಗಾರಿನ ಮಳೆಗೆ ಭೂಮಿ ಸೇರುವ ತವಕವಾದರೆ, ಶಿವಶಂಕರ್ ಬಣಗಾರನಿಗೆ ಹಂಪಿಯನ್ನು ಸೇರುವ ತವಕ.




ಹೌದು ಮುಂಗಾರಿನ ಮಳೆಗೆ ಇಡೀ ಹಂಪಿಯೇ ಮಿಂದೆದ್ದಿರುವಾಗ ಅವುಗಳ ಬಿಂಬ ಪ್ರತಿಬಿಂಬಗಳನ್ನು ಶಿವಶಂಕರ್ ಬಣಗಾರರಷ್ಟು ಕ್ಯಾಮೆರಾದಲ್ಲಿ ಸೆರೆ ಹಿಡಿದ ವ್ಯಕ್ತಿ ಮತ್ತೊಬ್ಬರಿಲ್ಲ!. ಮುಂಗಾರಿನ ಮಳೆಗೆ ಹಂಪಿಯ ಸ್ಮಾರಕಗಳು ಮಳೆಗನ್ನಡಿಯಲ್ಲಿ ತಮ್ಮ ಬಿಂಬಗಳನ್ನು ನೋಡಿಕೊಂಡು ಸಂತಸಗೊಳ್ಳುತ್ತವೆ ಎನಿಸುತ್ತದೆ. ಬಣಗಾರರ ಚಿತ್ರಗಳನ್ನು ನೋಡಿದಾಗ ಇದು ನಿಜ ಅನಿಸುತ್ತದೆ. ಬರಿಯ ಮಳೆಯ ಸಂದರ್ಭದಲ್ಲಿ ಅಷ್ಟೇ ಅಲ್ಲ ಮಳೆಗಾಲ ಚಳಿಗಾಲ ಬೇಸಿಗೆಕಾಲ ಹೀಗೆ ಎಲ್ಲ ಋತುಮಾನಗಳ ವಿವಿಧ ಕೋನಗಳಲ್ಲಿ ವಿವಿಧ ಆಯಾಮಗಳಲ್ಲಿ ಹಗಲು ರಾತ್ರಿ ದಿನದ ಇಪ್ಪತ್ನಾಲ್ಕು ಗಂಟೆಯ ಕಾಲದಲ್ಲಿ, ಹಂಪಿಯಲ್ಲಿಯ ಸೂರ್ಯೋದಯ ಹಾಗೂ ಸೂರ್ಯಾಸ್ತದ ರಂಗು ರಂಗಿನ ಫೋಟೋಗಳನ್ನು ಕ್ಯಾಮೆರಾದಲ್ಲಿ ಸೆರೆಹಿಡಿದು ಜಗತ್ತಿಗೆ ಪರಿಚಯಿಸುವ ಏಕೈಕ ವ್ಯಕ್ತಿ ಶಿವಶಂಕರ್ ಬಣಗಾರ. ಸೂರ್ಯೋದಯವನ್ನು ವೀಕ್ಷಿಸಲು ಹಂಪಿಯ ಎತ್ತರದ ಮಾತಂಗ ಪರ್ವತವನ್ನು ನಸುಕು ಕತ್ತಲಿನಲ್ಲಿಯೇ ಹಲವಾರು ಬಾರಿ ತನ್ನೊಂದಿಗೆ ಸ್ಥಳಿಯರು, ವಿದೇಶಿಯರನ್ನು ಸಹ ಕರೆದುಕೊಂಡು ಹತ್ತಿ ಕಾದು ಕುಳಿತು ಸೂರ್ಯೋದಯದ ಫೋಟೋಗಳನ್ನು ಸೆರೆಹಿಡಿದ ಮಹಾತ್ವಾಕಾಂಕ್ಷಿಯ ಫೋಟೋಗ್ರಾಫರ್ ಬಣಗಾರ. ಇವರ ಹಂಪಿಯ ಬಿಂಬ ಪ್ರತಿಬಿಂಬಗಳ ಕುರಿತು ಒಂದಷ್ಟು ನೋಟ.

ಫೋಟೋಗ್ರಾಫಿ ಒಂದು ವಿಶಿಷ್ಟ ಕಲೆ. ದೃಶ್ಯಗಳನ್ನು ಸರೆ ಹಿಡಿಯುವ ಜಾಣ್ಮೆ, ನೈಪುಣ್ಯತೆ, ತಾಳ್ಮೆಯಿದ್ದರೆ ಅದ್ಭುತವಾದ ಸೊಬಗಿನ ಛಾಯಚಿತ್ರಗಳನ್ನು ಒದಗಿಸಿ, ಆಸಕ್ತರ, ನೋಡುಗರ ಕಣ್ಣುಮನಸ್ಸುಗಳನ್ನುಖುಷಿಪಡಿಸುವಅವಕಾಶಫೋಟೋಗ್ರಾಫರದ್ದು. ಇಂಥ ಅವಕಾಶವನ್ನು ಮಿಸ್ ಮಾಡದೆ ತಾನು ಸೆರೆಹಿಡಿದ ಫೋಟೋಗಳನ್ನು ಆಸ್ವಾದಿಸಿ, ಫೇಸ್ಬುಕ್, ವಾಟ್ಸಪ್, ಸಾಮಾಜಿಕ ಜಾಲತಾಣಗಳ ಮೂಲಕ ಎಲ್ಲರಿಗೂ ತೋರಿಸಿ ಖುಷಿಪಟ್ಟು ನಲಿದಾಡುವ ಗುಣ ಗೆಳೆಯ ಶಿವಶಂಕರ್ ಬಣಗಾರನದ್ದು. ಹೌದು ಫೋಟೋಗಳಿಗೆ ಭಾಷೆಯ ಗಡಿ ಇರುವುದಿಲ್ಲ. ಅವು ಜಗತ್ತಾಗಿರುತ್ತವೆ. ಹೀಗಾಗಿಯೇ ಬಣಗಾರನ ಹಂಪಿಯ ಫೋಟೋಗಳು ಜಗತ್ತಿನ ಆಸಕ್ತರ ಗಮನ ಸೆಳೆದಿವೆ. ಹಂಪಿಯ ಫೋಟೋಗಳನ್ನು ಕಂಡು ವಿದೇಶಿಗರು ಹಂಪಿಯನ್ನು ನೋಡಲೇ ಬೇಕೆಂದು ಬಣಗಾರನ ಫೋಟೋಗಳನ್ನು ಹಿಡಿದು ಕೊಂಡು ಹಂಪಿಗೆ ಬರುತ್ತಿದ್ದಾರೆಂದರೆ ಆಶ್ಚರ್ಯವಾದರೂ ಇದು ಸತ್ಯ.



### ಶಿವಶಂಕರ್ ಬಣಗಾರ್

ಹಂಪಿಯ ಫೋಟೋಗ್ರಾಫಿ ಎಂದಾಕ್ಷಣ ಕೇಳಿ ಬರುವ ಏಕೈಕ ಹೆಸರು ಇವರದ್ದು. ಸ್ಮಾರಕಗಳ ಜೊತೆಗೆ ಬರುವ ಪ್ರವಾಸಿಗರು, ಅಬಾಲ ವೃದ್ದರು, ಹಂಪಿಯ ಬೆಟ್ಟ ಗುಡ್ಡ, ಪರಿಸರದ ಕೋತಿಗಳು, ಗಿಡ ಮರ ಹೂಗಳು, ದುಂಬಿಗಳು ಪಶು ಪಕ್ಷಿಗಳಿಂದ ಕರಡಿ, ಚಿರತೆ ವರೆಗೆ ಹೀಗೆ ವೈವಿಧ್ಯಮ ಚಿತ್ರಗಳನ್ನು ಕೇವಲ ನೆಲದ ಮೇಲಿಂದ ಅಷ್ಟೇ ಅಲ್ಲ ಆಕಾಶದಿಂದಲೂ ಹೆಲಿಕಾಪ್ಟರ್ ಮೂಲಕ ಚಿತ್ರಗಳನ್ನು ಸೆರೆಹಿಡಿದು ಹಂಪಿಯನ್ನು ಜಗತ್ತಿಗೆ ಮುಖಾಮುಖಿ ಯಾಗಿಸುವ ಪ್ರಯತ್ನ ಬಣಕಾರರದ್ದು. ವನ್ಯಜೀವಿ ಫೋಟೋಗ್ರಾಫರ್ ಆಗಿಯು ಹೆಸರು ಮಾಡಿದ್ದಾರೆ. ಹಂಪಿಯನ್ನು ಧ್ಯಾನಿಸುವ ಇವರು ಅದನ್ನೇ ಉಸಿರಾಗಿಸಿಕೊಂಡು ಬದುಕಿನ ಭಾಗವನ್ನಾಗಿ ಮಾಡಿಕೊಂಡಿದ್ದಾರೆ. ಹಂಪಿಯ ಬಗ್ಗೆ ಬಣಕಾರ ಇವರ ಆಸಕ್ತಿ ಉತ್ಸಾಹ ಕುತೂಹಲ ಆಶ್ಚರ್ಯವನ್ನುಂಟು ಮಾಡುತ್ತದೆ. ಹಂಪಿಯ ಬಗ್ಗೆ ವಿವಿಧ ಆಯಾಮಗಳಲ್ಲಿ ಲಕ್ಷಾಂತರ ಫೋಟೋಗಳನ್ನು ಕ್ಲಿಕ್ಕಿಸಿದರು ಇವರ ಆಸಕ್ತಿ ಉತ್ಸಾಹ ಕಡಿಮೆಯಾಗಿಲ್ಲ. ದಿನವೂ ಹೊಸತನ ಹುಡುಕಿ ಕ್ಲಿಕ್ಕಿಸುವ ಉಮೇದಿ ಇವರಲ್ಲಿದೆ. ಪತ್ರಕರ್ತನಾಗಿ ಸುದ್ದಿಗಳಿಗೆ ಫೋಟೋ ತೆಗೆಯುತ್ತಿದ್ದ ಬಣಕಾರ ಈಗ ಫೋಟೋಗ್ರಾಫಿಯನ್ನೇ ಜೀವನೋತ್ಸವವನ್ನಾಗಿ ಮಾಡಿಕೊಂಡಿದ್ದಾರೆ. ಇವರು ತೆಗೆದ ಫೋಟೋಗಳು ಸ್ಥಳೀಯವಾಗಿ ರಾಜ್ಯ ಅಂತರರಾಜ್ಯ ಹಾಗೂ ಜಪಾನ್ ಮೊದಲಾದ ವಿದೇಶಗಳಲ್ಲಿಯೂ ಪ್ರದರ್ಶನಗಳನ್ನು ಕಂಡಿವೆ. ಅಮೇರಿಕದ ಅಕ್ಕ ಸಂಘಟನೆಯವರು ಪ್ರಕಟಿಸಿರುವ ಕರ್ನಾಟಕ ಐಸಿರಿ ಕಾಫಿ ಟೇಬಲ್ ಬುಕ್ಕಿನಲ್ಲಿ ಇವರ ಹಂಪಿ ಚಿತ್ರಗಳು ಪ್ರಕಟಗೊಂಡಿವೆ. ಪ್ರವಾಸೋದ್ಯಮ ಇಲಾಖೆಯ ಫೋಟೋಗ್ರಾಫಿ ಹಾಗೂ ಹಂಪಿ ಉತ್ಸವದ ಸಂದರ್ಭದ ಛಾಯಾಗ್ರಹಣ ಸ್ಪರ್ಧೆಯಲ್ಲಿ ಪ್ರಶಸ್ತಿಗಳನ್ನು ತಮ್ಮದಾಗಿಸಿಕೊಂಡಿದ್ದಾರೆ. ಹಂಪಿಯ ಫೋಟೋಗಳು ಇತ್ತೀಚಿಗೆ ಮೈಸೂರಿನ ಕಾಫಿ ಸಿಟಿ ಗ್ಯಾಲರಿ ಯಲ್ಲಿ ತಿಂಗಳಗಟ್ಟಲೆ ಪ್ರದರ್ಶನಗೊಂಡವು. ಗ್ರೀನ್ ಆಸ್ಕರ್ ಪ್ರಶಸ್ತಿ ಪಡೆದ ಕೃಪಕರ ಸೇನಾನಿ ಹಾಗೂ ಹೆಸರಾಂತ ಹಿರಿಯ ಛಾಯ ಚಿತ್ರಗಾರರು ವಿಕ್ಷೀಸಿ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಇಷ್ಟೇ ಅಲ್ಲ ಅಂತಾರಾಷ್ಟ್ರೀಯ ಮಟ್ಟದ ವಿದೇಶಿ ಪ್ರಶಸ್ತಿಗೆ ಸಹ ಭಾಜನರಾಗಿರುವುದನ್ನು ಹಂಚಿಕೊಂಡಿದ್ದಾರೆ. ಮೈಸೂರಿನ ಪತ್ರಿಕರ್ತರ ಸಂಘ ಗೌರವಿಸಿದೆ. ದಾವಣಗೆರೆ ಸೇರಿದಂತೆ ನಾಡಿನ ಅನೇಕ ಸಂಘ ಸಂಸ್ಥೆಗಳು ಇವರ ಛಾಯಾಗ್ರಹಣವನ್ನು ಕೊಂಡಾಡಿ ಗೌರವಿಸಿವೆ.







ಎಂ.ಎಂ.ಶಿವಪ್ರಕಾಶ
ಲೇಖಕರು: ಹೊಸಪೇಟೆ
ಮೊ: 9449654489
Hampi Times E-paper
SCAN AND READ



**ಕವಿ ಮನಸು**

## ಭವ್ಯ ಭಾರತ



ಭಾರತವು ನಮ್ಮದು ಭಾರತೀಯರು ನಾವು
ನಮ್ಮ ಉಸಿರು ಭಾರತ ಹೆಮ್ಮೆಯ
ಪ್ರಜೆಗಳಾದೆವು
ಭರತ ಖಂಡದಲ್ಲಿ ಜನ್ಮತಾಳಿದ್ದೇ ನಮ್ಮ
ಪುಣ್ಯವು
ಆಹಾ ಎಷ್ಟೊಂದು ಸೊಬಗು ನಮ್ಮ
ಭಾರತವು//

ಬಣ್ಣಿಸಲಾಗದು ಭಾರತದ ಸೌಂದರ್ಯವ
ಬರೆಯುವ ಪದಗಳು ಸೋತಂತ ಅನುಭವ
ಹೊಗಳಿದಷ್ಟು ಪದಗಳಿಗೆ ಬಂದಿದೆ
ಕೊರತೆಯ ಬಂಧವ
ನಮ್ಮ ದೇಶ ಮಹಾಪುಣ್ಯಮಾಡಿದ
ಭೂಮಿಯ ಹವಾ
ನಾರಿ ಕುಲಕ್ಕೆ ಸನ್ಮಾನ ಗೌರವ ನೀಡಿದ ಭರತ
ಖಂಡದ ಭಾವ//

ಸಿದ್ದಿ ಬುದ್ದಿಯ ನಾಡು ನಮ್ಮ ಭಾರತ
ಇಡೀ ನಾಡಿನಲ್ಲೂ ಬುದ್ಧಿವಂತರನ್ನು
ಸೃಷ್ಟಿಸಿದ ಭವ್ಯ ಭಾರತ
ಇತಿಹಾಸದ ಪುಟಗಳಲ್ಲಿ ಮಿಂಚಿದ ಜ್ಯೋತಿ
ಅನವರತ
ಸಮಾನತೆ, ಸಹಬಾಳ್ವೆ ಸೃಷ್ಟಿಯ ಸುಕೃತಾ//

ಹಲವು ಧರ್ಮ, ಜಾತಿ, ಭಾಷೆಗಳ ಬೀಡು
ಅನೇಕ ರಾಜ್ಯ ಒಂದು ದೇಶದ ಸಮಾನತೆಯ
ಕರುನಾಡು
ಐಕ್ಯತೆಯ ಕಂಪನ್ನು ಸಾರುತ್ತಿರುವ
ಸುಂದರನಾಡು
ಭಾಷೆ,ವೇಷ ಬೇರೆಯಾದರೂ ಎಲ್ಲರೊಂದೇ
ಎನ್ನುವ ಒಲವನಾಡು//

ಸ್ವಾತಂತ್ರ್ಯದ ಕಹಳೆ ಊದಿ ತ್ರಿವರ್ಣ ಧ್ವಜ
ಏರಿಸುತ
ಭಾರತಕ್ಕೆ ಸ್ವಾತಂತ್ರ್ಯ ಘೋಷಿಸಿದರು
ಗಾಂಧಿತಾತ
ದೇಶಪ್ರೇಮ ವೀರತ್ವದಲ್ಲಿ ಸದಾ ಹಾಡಾದ
ಭಾರತ
ಭಾರತದಲ್ಲಿ ಸ್ವಾತಂತ್ರ್ಯತೆಯ ಹಬ್ಬವಿರಲಿ
ಜೀವನಪರ್ಯಂತ//

– ಸವಿತಾ ಸತೀಶ್ ಶೆಟ್ಟಿ
ಬೆಳ್ತಂಗಡಿ, ದಕ್ಷಿಣ ಕನ್ನಡ

## ಕೈಹಿಡಿದು ನಡೆಸೆನ್ನನು



ವೇಗವಾಗಿ ಚಲಿಸುತ್ತಿರುವ ಜಗತ್ತು
ನಿಂತಲ್ಲಿಯೇ ನಿಂತಿರುವೆ ಚಿಂತೆಯಲ್ಲಿ
ಬೇಸತ್ತು.
ನನ್ನ ಸುತ್ತ ಇರುವರು ಸಾವಿರಾರು ಜನ
ಇದ್ದರು ನನಗಾಗಿ ಇಲ್ಲ ಮಿಡಿಯುವ
ಮನ.
ಕಾರಣ ತಿಳಿಯದೆ ಕಣ್ಣಂಚಲ್ಲಿ ಕಣ್ಣೀರು
ಚಿಂತಿಸಿ ದಾರಿ ತೋರದೆ ಕಾಡುತ್ತಿದೆ
ಬಿಸಿಯುಸಿರು.
ಬದುಕಲು ಬೇಕಾಗಿದೆ ಭರವಸೆಯ
ಚಿಲುಮೆ
ದುಃಖದಲ್ಲಿ ದಹಿಸಿ ಮನವಾಗಿದೆ ಕಾದ
ಕುಲುಮೆ.
ಕರೆದೊಡನೆ ಓ ಎನ್ನುವ ತಾಯಿಯ
ಪ್ರೀತಿಯಂತೆ
ಅಕ್ಕರೆಯಲ್ಲಿ ಅಪ್ಪಿಕೊಳ್ಳುವ ಅಪ್ಪನ
ಅಪ್ಪುಗೆಯಂತೆ.
ಬೇಡುವೆನು ನನ್ನೊಡನೆ ಇರಲು ನಿನ್ನ
ಕರುಣೆಯನ್ನು
ಕರುಣಾಳು ಇಂತಾದರೂ ಬಾ, ಕೈಹಿಡಿದು
ನಡೆಸೆನ್ನನು.
– ಮಂಜುಶ್ರೀ ಮುರಳೀಧರ್

# ಅಂಜನ



ಯವ್ವೋ ಯವ್ವೋ.... ಬೇಗ ಬೇಗ ಊಟಕ್ಕೆ ನೀಡು, ಇವತ್ತು ನಮ್ಮ ಶಾಲೆಯಲ್ಲಿ ನಮ್ಗೆಲ್ಲ ಸೂಜಿ ಮಾಡಲಿಕ್ಕೆ ಡಾಕ್ಟ್ರು ಬಂದಿದ್ದಾರೆ. ಈ ದಿನ ಯಾರು ಶಾಲೆ ತಪ್ಪಿಸುವಂತಿಲ್ಲ, ಮೊದಲೇ ಮಲ್ಲಪ್ಪ ಸಾರ್ ಹೇಳಿ ಕಳಿಸಿದ್ದಾರೆ, ಬೇಗ ಊಟಕ್ಕೆ ನೀ..ಡೂ...... ಅಂದವನೆ ಅಲ್ಲೆ ಇದ್ದ ನೆಲುವುನಿಂದ ರೊಟ್ಟಿ ಚಿಬ್ಬಲಿ ಕೆಳಗಿಳಿಸಿ, ಎರಡು ರೊಟ್ಟಿ ಮೇಲೆ ಸ್ವಲ್ಪ ಹಸಿಮೆಣಸಿನಕಾಯಿ ಹಿಂಡಿ ಹಚ್ಚಿಕೊಂಡು ಇನ್ನೇನು ಒಂದು ಈರುಳ್ಳಿಗೆ ಕೈ ಹಾಕಬೇಕು ಅನ್ನುವಹೊತ್ತಿಗೆ, ಬುಡು ಸುಮ್ಮನೆ, ಉಳ್ಳಗಡ್ಡಿ ಎರಡು ರೂಪಾಯಿಗೆ ಕೇಜಿ ಆಗ್ಯಾವು ಬಾಯಿ ನಾರತ?ತಿ ಅಂದ್ಲು ನಮ್ಮವ್ವ. ಇಲ್ಲ ಬಿಡಬೆ ಒಂದೇ ಅಂದ್ಕೊಂತ ಕೈಯಾಗನ ರೊಟ್ಟಿ ತಿಂದು, ಮೂಗು ಒರಸಿಕೊಳ್ಳುತ್ತಾ ಉಂಡ ಕೈಯನ್ನು ಚಣ್ಣಕ್ಕ ತಿಕ್ಕಿಕೊಂಡು, ಬರ್ತಿನಬೇ.. ಬಾಯ್.. ಬಾಯ್........ ಅಂದ್ಕೊಂತ ಮನೆಯಿಂದ ಜಿಗಿದೆ.

ಸೀದಾ ಕಲ್ಲೇಶ್ವರ ದೇವರ ಗುಡಿಯ ಮಂದಾಸಿ, ದಬ್ಬಗುಡಿ ಸಂದಿ ಹಿಡಿದು, ನೇರವಾಗಿ ಅಗಸಿಬಾಗಲದಿಂದ ಜಾರಗಲ್ಲು ಇಳಿಯುತಿದ್ದೆ, ಸುಮಾರು ಹತ್ತಿಪ್ಪತ್ತು ಜನ ಜಾರುಗಲ್ಲಿನ ಪಕ್ಕದಲ್ಲೇ ಇದ್ದ ಕರಿಬೆಟ್ಟಪ್ಪನವರ ಕಡ್ಡಿಪೆಟ್ಟಿಗೆ ಅಂಗಡಿಯಲ್ಲಿ ಒಬ್ಬರ ಮೇಲೆ ಒಬ್ಬರು ತುರಿಕಿಕೊಂಡಿದ್ದರು, ಏನಿರಬಹುದು ಅಂದುಕೊಂಡು ಹತ್ತಿರ ಹೋದ್ರೆ, ಅಂಗಡಿಯಲ್ಲಿ ಗುಸು ಗುಸು ಪಿಸು ಪಿಸು ಮಾತನಾಡತ್ತಾ ನಿಂತಿದ್ದರು. ನನಗೂ ಕುತೂಹಲ ಅದೇನೈತಿ ಒಂದು ಕೈ ನೋಡೇ ಬಿಡೋಣ ಅಂದುಕೊಂಡು ಮೇಲಿನಿಂದ, ಕೆಳಗಿನಿಂದ ಏನಲ್ಲಾ ನಿಗರಾಡಿದರು ಒಳಗೆ ಹೋಗಲಿಕ್ಕೆ ಆಗಲಿಲ್ಲ.



ಜಿ ಶಿವಕುಮಾರ್ ಸೋಗಿ
ಲೇಖಕರು, ಕಾರವಾರ ಕೈಗಾ

Hampi Times E-paper
SCAN AND READ

ಆವಾಗಲೆ ನಮ್ಮ ತಲೆ ಓಡಿಸಿ ಒಂದು ಉಪಾಯ ಮಾಡಿ, ಕೆಳಗಿನಿಂದ ಒಬ್ಬನ ಕಾಲ ಸಂದಿಯಲ್ಲಿ ತೂರಿಕೊಂಡು ತಿಕ್ಕಾಡಿಕೊಂಡು ಅಂತೂ ಇಂತೂ ಅಂಗಡಿ ಒಳಗೆ ನುಗ್ಗಿದವನಿಗೆ ಭಯಂಕರ ಆಶ್ಚರ್ಯ ಒಬ್ಬರೂ ಕಣ್ಣಿಗೆ ಕಾಣತಿಲ್ಲ! ಕೋಣೆಯ ತುಂಬಾ ಕತ್ತಲು, ಬರೀ ಬಿಳಿ ಬಿಳಿ ಕಣ್ಣುಗಳು ಮಾತ್ರ ಕಾಣುತಿದ್ದವು. ತುಟಿ ಪಿಟಕ್ಕ ಅನ್ನದೆ ಎಲ್ಲರು ಸುಮ್ಮನೆ ಕುಳಿತಿದ್ದರು ನನಗಂತು ಕುತೂಹಲದ ಎಲ್ಲೆ ಮೀರಿ ಹೋಯಿತು, ಆದರೆ ಎಲ್ಲರ ಕಣ್ಣುಗಳು ತದೇಕಚಿತ್ತದಿಂದ ಒಂದೇ ಕಡೆ ನೋಡುತಿರುವುದನ್ನು ಗಮನಿಸಿದೆ!

ಅಲ್ಲೇನಿಲ್ಲ, ಕೇವಲ ಒಂದು ಸೇರು ಅದರ ಮೇಲೊಂದು ದೀಪದ ಬುರುಡೆ ಎಲ್ಲರ ಕಣ್ಣು ಆ ದೀಪದ ಮೇಲೇ ಇತ್ತು, ನೀರವ ಮೌನ, ಮೊದಲೇ ಸಣ್ಣ ಕೋಣೆ, ಅಪ್ಪಪ್ಪಾ ಅಂದರೆ ಏಳೆಂಟು ಜನಗಳನ್ನು ಹಿಡಿಯಬಹುದಾದ ಜಾಗದಲ್ಲಿ, ಹೆಚ್ಚು ಕಡಿಮೆ ಇಪ್ಪತ್ತು ಜನರು ಒಬ್ಬರ ಮೇಲೆ ಒಬ್ಬರಂತೆ ತುರಿಕಿಕೊಂಡು ನಿಂತಿದ್ದರಿಂದಲೋ ಏನೊ ಬೆಳಕಿನ ಲವಲೇಶವೂ ಅಲ್ಲಿ ಸುಳಿಯುತ್ತಿರಲ್ಲಿಲ್ಲ, ಮೇಲಾಗಿ ಮದ್ಯಾಹ್ನ ಬೇರೆ ಧಗ ಧಗ ಕುದಿಯುತಿತ್ತು ಅಲ್ಲಿಯ ಸೆಕೆ.

ಆಗ ತಾನೆ ಉಂಡು ಹೋಗಿದ್ದ ನನಗೆ ಅಲ್ಲಿಯ ವಾತವರಣ, ಜನರ ತಿಕ್ಕಾಟ, ಬೆವರಿನಿಂದ ನಾರುತಿದ್ದ ಬಟ್ಟೆಗಳು, ಸಾಬೂನು ಕಾಣದಿರೊ ಮೈಗಳು, ತಡೆದುಕೊಳ್ಳಲು ಆಗದೆ ತಿಂದಿದ್ದೆಲ್ಲ ಬಾಯಿಗೆ ಬಂದಂತಾಗಿ, ಒಂದೇ ಒಂದು ಡೈಗು (ಊಧ್ವ ವಾಯಿ) ಹೊಡೆದೆ ನೋಡಿ, ಪಕ್ಕದಲ್ಲಿದ್ದ ಯಾರೋ ಪುಣ್ಯಾತ್ಮ, ಲೇ ತಮ್ಮ ಮುಖ್ದ ಹತ್ತಿರ ಡ್ಯಾಗ್ತಿಯಲ್ಲೊ ಏನು ತಿಂದ ಬಂದಿಯ? ಗೊತ್ತಾಗುವುದಿಲ್ಲ ನಿನಗೆ ಗಬ್ಬು ನಾರತೈತಿ, ಸರಿ ಅತ್ಲಾಗ ಅಂದು ನನ್ನ ಇನ್ನು ಸ್ವಲ್ಪ ಗೊಡೆಯ ಕಡೆಗೆ ತಳ್ಳಿದ.

ಎಲಾ ಇವನ್ ಇದು ಒಳ್ಳೆಯ ಪಜೀತಿ ಆಯಿತಲ್ಲ ಕುಂದರಲಿಕ್ಕೂ ಆಗುತಿಲ್ಲ, ನಿಂದರಿಲಿಕ್ಕೂ ಆಗುತಿಲ್ಲ, ಬೇಡಬಿಡು ಸಾಕು ಹೊರಗಡೆ ಹೋಗ್ತೀನಿ ಅಂದರೆ ಊಂ.. ಹುಂ, ಅದು ಸಾಧ್ಯವೇ ಇಲ್ಲ. ಅಂತಹದರಲ್ಲಿ ಒಬ್ಬ ಯಜ್ಜ ನನ್ನ ಎಮ್ಮೆ ಕಳುದು ಹೋಗಿ ಒಂದು ವಾರ ಆಯಿತು ಸಲ್ಪ ನೋಡಿ ಅಲ್ಲೆ ಎಲ್ಲಿಯಾದರು ಕಾಣಿಸುತ್ತದೆ ಏನು! ಎಂದು ಕೇಳಿದ್ದನ್ನು ಕಂಡ ನನಗೆ, ಇಲ್ಲಿ ಒಬ್ಬರ ಮುಖ ಮತ್ತೊಬ್ಬರಿಗೆ ಕಾಣವಲ್ದು ಅಂತಹುದರಲ್ಲಿ ಈ ಮನುಷ್ಯನಿಗೆ ಎಮ್ಮೆ ಎಲ್ಲಿಂದ ಕಾಣಬೇಕು! ಅಂದವ್ನೆ ಕಿಸಕ್ಕನೆ ನಕ್ಕುಬಿಟ್ಟೆ. ಅಷ್ಟೆ ಎಲ್ಲ ಬದಲಾಗಿ ಹೊಯಿತು.

ಇದ್ದಕಿದ್ದಂತೆ ತೋ ತೊತು..ಯಾರದು? ಮಾತಾಡಬೇಡಿ ಎಂದರೆ ಮಾತಾಡ್ತೀರಲ್ಲಾ, ಸಾಕು ಇವತ್ತಿಗೆ ಇಲ್ಲಿಗೆ ಸಾಕು, ಕರೆಂಟು ಹಾಕು ಯಪ್ಪ, ಆನ್ ಮಾಡು ಅಂದ ತಕ್ಷಣ ಯಾರೊ ಒಬ್ಬ ಲೈಟ್ ನ ಬಟನ್ ಒತ್ತಿದ ನೋಡಿದರ! ಕನಿಷ್ಠ ಅಂದರೂ ಇಪ್ಪತೈದು ಜನ ತುಂಬಿಕೊಂಡಿದ್ದರು ಅಷ್ಟೇ ರೂಮಿನಲ್ಲಿ. ಇದ್ದಕಿದ್ದಂದಂತೆ ರೂಮಿನಲ್ಲಿ ಜಗಮಗ ಬೆಳಕು, ಇವರೆಲ್ಲರ ಗುಂಪಿನ ಮಧ್ಯೆ ಒಂದು ಚಿಮಿಣಿ ಬುರುಡೆ, ನೇರವಾಗಿ ಅದರ ಎದುರುಗಡೆ ಒಬ್ಬನ ಕೈಯಲ್ಲಿ ಒಂದು ಸಣ್ಣ ಡಬ್ಬಿ ಇತ್ತು, ಅದನ್ನು ಕೈಯಲ್ಲಿ ಹಿಡಿದು ತದೇಕಚಿತ್ತದಿಂದ ನೋಡುತ್ತ ಕುಳಿತ ಆ ವ್ಯಕ್ತಿಯ ಪರಿಚಯ ನನಗಿರಲಿಲ್ಲ. ಆದರು ಅವನ ಏಕಾಗ್ರತೆ ಮೆಚ್ಚುವಂತಹದು, ಏಕೆಂದರೆ ಲೈಟ್ ಹಚ್ಚಿದ ನಂತರವೂ ಅವನು ಅದೇ ಡಬ್ಬಿಯನ್ನು ಕಣ್ ಪಿಳಿಕಿಸದಂತೆ ನೋಡುತ್ತಾ ಕುಳಿತಿದ್ದದ್ದನ್ನು ಕಂಡು, ಆ ಪಟಗಾ(ರುಮಾಲು) ಸುತ್ತಿದ ಮುದುಕ, ಏ ತಮ್ಮ ಸಾಕು ಸಾಕು ಬಿಡು, ತತ ಅದನ್ನು ಮತ್ತೆ ನಾಳೆ ನೋಡುವಿಯಂತೆ ಎನ್ನುತ್ತ ಅವನ ಕೈಯಿಂದ ಆ ಡಬ್ಬಿಯನ್ನು ತೆಗೆದುಕೊಂಡವನೆ, ಅದನ್ನು ಅವನ ಇನ್ನೊಂದು ಕೈಯಲ್ಲಿದ್ದ ಕಡು ಕೆಂಪು ವಸ್ತ್ರದಲ್ಲಿ ಸುತ್ತಿ ಇನ್ನೊಂದು ಕೈಚೀಲದಲ್ಲಿ ಬದ್ರವಾಗಿ ಇರಿಸಿದ ಮೇಲೆ, ನಡ್ರೆಪ್ಪ ನಡೆಯಿರಿ ಇವತ್ತಿಗೆ ಇಷ್ಟು ಸಾಕು, ನಾಳೆ ಇದಾ ಟೈಮಿಗೆ ಎಲ್ಲರು ಸೇರೋಣ ಇಲ್ಲೇ ಅಂದುಕೊಳ್ಳುತ್ತಾ ಆ ಮುದುಕ ಕೆಮ್ಮಿಕೊಳ್ಳುತ್ತ ಅಲ್ಲೆ ಪಕ್ಕಕ್ಕೆ ಕ್ಯಾಕರಿಸಿ ಉಗುದು, ಲುಂಗಿ ಕೈಯಲ್ಲಿ ಹಿಡಿದುಕೊಂಡು ಹಾಂಗ್ ಮೆಟ್ಟಲುಗಳನ್ನು ಇಳಿದು ಆ ಪಟಗಾದ ಅಜ್ಜ ಹೊರಟು ಹೋದ.

ಇತ್ತಲಾಗ ಟೈಮ್ ನೋಡಿದರ! ಆಗಲೆ ಎರಡು ಗಂಟೆ ಹತ್ತು ನಿಮಿಷ!! ಮಲ್ಲಪ್ಪ ಮಸ್ತಾರು ನೆನಪಾಗಿದ್ದೆ ತಡ, ಒಂದೆ ಉಸಿರಿನಲ್ಲಿ ಓಡಿದ್ದೆ ಓಡಿದ್ದು, ಆಗಲೆ ಬಸವರಾಜಪ್ಪ, ಮಲ್ಲೀಕೇಶಪ್ಪ, ಮಲ್ಲಪ್ಪ ಮೇಸ್ತ್ರು ಎಲ್ಲಾ ಹುಡುಗರನ್ನು ಸಾಲಿಗೆ ನಿಲ್ಲಿಸುತಿದ್ದುದ್ದನ್ನು ಕಂಡು ನನ್ನ ಜಂಘಾ ಬಲವೇ ಹುಡಿಗಿ ಹೋಹಿತು, ಇನ್ನೇನು ಬಡ್ತಾ ಬೀಳೊದು ಪಕ್ಕ ಅನಿಸಿ, ಏನಾದರು ಆಗಲಿ ದರ್ಯಮಾಡಿ ಶಾಲೆಯ ಗೇಟು ತಗೆದು ಒಳಗೆ ಕಾಲು ಇಡಬೇಕು, ಲೇ ಗೌಡಾ... ಅಲ್ಲೇನು ಮಾಡತಿದ್ದೀಯ? ಬಾ ಇಲ್ಲಿ ಅಂದರು ಮಲ್ಲಪ್ಪ ಸಾರ್. ಸಿಕ್ಕದ್ದೆ ಚಾನ್ಸು ಅಂದವನೆ, ಬಂದೆ ಸಾರ್ ನೀರು ಕುಡಿಲಿಕ್ಕೆ ಬಂದಿದ್ದೆ, ಎನ್ನುತ್ತಾ ನಾಲ್ಕನೇ ತರಗತಿಯ ಮೂರನೇ ಸಾಲಿನ ಕೊನೆಯಲ್ಲಿ ನಿಂತೆ.

# ಹುಷಾರು!!.....ಮುಂದಿನ ಸರದಿ ನಿಮ್ಮದಾಗಿರಬಹುದು ?

ಅಮರೇಶ್ ತಮ್ಮ ಹೊಲದಲ್ಲಿ ಕೆಲಸ ಮಾಡುತ್ತಿದ್ದ ಆಳುಗಳಿಗೆ ಸಲಹೆ ಸೂಚನೆಗಳನ್ನು ಕೊಟ್ಟು ತಮ್ಮ ತೋಟದ ದೊಡ್ಡ ಬೇವಿನ ಮರದ ನೆರಳಿನಲ್ಲಿ ಕುಳಿತುಕೊಂಡು ಆಳುಗಳ ಕೆಲಸವನ್ನು ವೀಕ್ಷಿಸತೊಡಗಿದರು. ಜೇಬಿನಲ್ಲಿಟ್ಟ ಅವರ ಮೊಬೈಲ್ ಗೆ ಬಂದು ಬಿದ್ದ ಸಂದೇಶ ಟಿಂಗ್ ಎಂಬ ಶಬ್ದದಿಂದ ಇವರನ್ನು ಎಚ್ಚರಿಸಿತು. ಸಂದೇಶವನ್ನು ತೆರೆದು ನೋಡಿದ ಅಮರೇಶರಿಗೆ ಅಚ್ಚರಿಯಾಯಿತು.

ನೆನ್ನೆ ತಾನೆ ಸಿಟಿಯ ಕಾಲೇಜಿನಲ್ಲಿ ಓದುತ್ತಿದ್ದ ಮಗಳಿಗೆ ಕರೆ ಮಾಡಿ ತನ್ನ ಅಕೌಂಟಿಗೆ ಮಗಳ ಕಾಲೇಜಿನವರು ಕೊಡುತ್ತಿದ್ದ ಸ್ಕಾಲರ್ಶಿಪ್ಪ ಹಣ ಜಮೆಯಾಗಿರುವುದನ್ನು ಹೇಳಿ ಸಂತಸ ವ್ಯಕ್ತಪಡಿಸಿದ್ದ ಅಮರೇಶರಿಗೆ ಮಗಳು ಕವನ ಆ ಸ್ಕಾಲರ್ಶಿಪ್ಪ ಹಣದಲ್ಲಿ ಲ್ಯಾಪ್ಟಾಪ್ ತೆಗೆದುಕೊಳ್ಳುವುದಾಗಿಯೂ ಈ ಬಾರಿ ತನ್ನನ್ನು ನೋಡಲು ಬಂದಾಗ ತನಗೆ ಇನ್ನಷ್ಟು ಹಣ ಹಾಕಿ ಹೊಸ ಲ್ಯಾಪ್ಟಾಪ್ ಕೊಡಿಸಲು ಫರ್ಮಾನು ಹೊರಡಿಸಿದ್ದಳು. ಸಂತಸದಿಂದಲೇ ಮಗಳ ಮಾತುಗಳನ್ನು ಆಲಿಸಿ ಈ ಬಾರಿಯ ಬೆಳೆ ಕೈಗೆ ಬಂದ ಕೂಡಲೇ ಆಕೆಗೆ ಲ್ಯಾಪ್ಟಾಪ್ ಕೊಡಿಸುವುದಾಗಿ ಒಪ್ಪಿಕೊಂಡಿದ್ದರು.

ಅಮರೇಶಪ್ಪ ಮತ್ತು ಪ್ರಭ ದಂಪತಿಗಳು ಪುಟ್ಟ ಹಳ್ಳಿಯೊಂದರಲ್ಲಿ ವಾಸವಾಗಿದ್ದ ಸಣ್ಣ ಹಿಡುವಳಿದಾರರಾಗಿದ್ದರು. ಅಷ್ಟೇನೂ ಉತ್ತಮ ಅಲ್ಲದಿದ್ದರೂ ಮಧ್ಯಮವರ್ಗದ ರೈತಾಪಿ ಜೀವನ ಅವರದಾಗಿತ್ತು. ಪತ್ನಿ ಪ್ರಭ ಒಳ್ಳೆಯ ಗೃಹಿಣಿಯಾಗಿದ್ದು ಮನೆಯ ಎಲ್ಲ ಕೆಲಸ ಕಾರ್ಯಗಳನ್ನು ನಿರ್ವಹಿಸುತ್ತಾ ಗಂಡನಿಗೆ ಒಕ್ಕಲುತನದಲ್ಲಿ ಕೂಡ ಸಹಾಯ ಮಾಡುತ್ತಿದ್ದಳು. ಆದರೂ ಒಕ್ಕಲುತನದ ಅನಿರೀಕ್ಷಿತತೆಗಳು ತಮ್ಮ ಮಕ್ಕಳ ಜೀವನಕ್ಕೆ ಹೊಡೆತ ತರಬಾರದು ಎಂಬ ಭಾವದಿಂದ ಮಕ್ಕಳಿಬ್ಬರ ಉನ್ನತ ವಿದ್ಯಾಭ್ಯಾಸಕ್ಕೆ ಹೆಚ್ಚು ಒತ್ತು ನೀಡಿದ್ದರು.

ಮಕ್ಕಳಿಬ್ಬರು ಒಳ್ಳೆಯ ವಿದ್ಯಾವಂತರಾಗಿದ್ದು ಮಗಳು ಕವನ ಮತ್ತು ಮಗ ಪ್ರತೀಕ್ ಇಬ್ಬರೂ ಹತ್ತಿರದ ನಗರದಲ್ಲಿ ಕ್ರಮವಾಗಿ ಇಂಜಿನಿಯರಿಂಗ್ ಮತ್ತು ಪಿಯು ವಿದ್ಯಾಭ್ಯಾಸಗಳಲ್ಲಿ ತೊಡಗಿಕೊಂಡಿದ್ದರು. ಅದರಲ್ಲೂ ಮಗಳು ಕವನ ಪಿಯುಸಿಯಲ್ಲಿ ಉತ್ತಮ ಅಂಕಗಳನ್ನು ಗಳಿಸಿ ಸಿಇಟಿಯಲ್ಲಿ ಮೆರಿಟ್ ಆಧಾರದ ಮೇಲೆ ದೊರೆತ ಕಂಪ್ಯೂಟರ್ ಸೈನ್ಸ್ ವಿಭಾಗವನ್ನು ಆಯ್ದುಕೊಂಡು ಇಂಜಿನಿಯರಿಂಗ್ ಕಾಲೇಜು ಸೇರಿದ್ದು ದಂಪತಿಗಳಿಗೆ ಸಂತಸದ ಜೊತೆಗೆ ಹೆಮ್ಮೆಯನ್ನು ಮೂಡಿಸಿತ್ತು.

ಕಾಲೇಜು ಪ್ರಾರಂಭವಾಗಿ ಕೇವಲ ನಾಲ್ಕು ತಿಂಗಳಾಗಿತ್ತು... ಈ ಮುನ್ನ ಪಿಯು ಓದುವಾಗ ಮಗಳಿಗೆ ಫೋನ್ ಕೊಡಿಸದೇ ಇದ್ದ ಕಾರಣ ಮಗಳ ಬ್ಯಾಂಕ್ ಖಾತೆಗೆ ಇವರ ಫೋನ್ ನಂಬರ್ ನೋಂದಣಿಯಾಗಿತ್ತು. ಇಂಜಿನಿಯರಿಂಗ್ ಕಾಲೇಜಿಗೆ ಹೋಗುವಾಗ ಅವಶ್ಯಕತೆ ಬಿದ್ದಾಗ ಹಣ ತೆಗೆದುಕೊಳ್ಳಲಿ ಎಂದು ಆಕೆಗೆ ಒಂದು ಎಟಿಎಂ ಕಾರ್ಡ್ ಮಾಡಿಸಿ ಕೊಟ್ಟಿದ್ದರು ಅಮರೇಶಪ್ಪ.

ನಿನ್ನೆ ತಾನೆ ಸ್ಕಾಲರ್ಶಿಪ್ ಹಣ ಮಗಳಿಗೆ ಬಂದದ್ದನ್ನು ಆಕೆಗೆ ಫೋನ್ ಮಾಡಿ ಹೇಳಿದ ತಂದೆ ಇದೀಗ ಮಗಳ ಖಾತೆಯಿಂದ ಸುಮಾರು 30,000 ದಷ್ಟು ಹಣ ತೆಗೆಯಲಪ್ಪಟ್ಟಿದೆ ಎಂಬ ಸಂದೇಶವನ್ನು ಓದಿ ಅವರ ಹಣೆಯ ಮೇಲಿನ ನೆರಿಗೆಗಳು ಹೆಚ್ಚಾದವು. ಕಟ್ಟಿದ ಕೈ ಗಡಿಯಾರದಲ್ಲಿ ಸಮಯ ನೋಡಿಕೊಂಡ ಅವರು ಮಗಳು ಈಗ ತಾನೆ ಕಾಲೇಜಿಗೆ ಹೋಗುತ್ತಿರುವವಳು ಅಂತದರಲ್ಲಿ ಇಷ್ಟೊಂದು ಹಣವನ್ನು ಏಕೆ ತೆಗೆದಿದ್ದಾಳೆ ಎಂಬ ಅನುಮಾನದಿಂದ ಆಕೆಗೆ ಕರೆ ಮಾಡಿ ಎಲ್ಲಿರುವೆ ಎಂದು ಕೇಳಿದರು. ತಾನಿನ್ನೂ ಮೆಸ್ ನಲ್ಲಿ ತಿಂಡಿ ತಿನ್ನುತ್ತಿರುವುದಾಗಿಯೂ ನಂತರ ಕಾಲೇಜಿಗೆ ಹೋಗುತ್ತೇನೆ ಎಂದು ಮಗಳು ಉತ್ತರಿಸಿದಳು. ಆಗ ಅಮರೇಶರು ಮಗಳಿಗೆ ಆಕೆಯ ಖಾತೆಯಿಂದ ಅಷ್ಟೊಂದು ಹಣವನ್ನು ತೆಗೆದಿರುವುದೇಕೆ ಎಂದು ಕೇಳಿದರು. ಗಾಬರಿಯಾದ ಕವನ ಇಲ್ಲಪ್ಪ, ನಾನು ಹಾಸ್ಟೆಲ್ ಬಿಟ್ಟು ಹೊರಗೆಲ್ಲೂ ಹೋಗಿಲ್ಲ ಎಂದು ಕೂಡಲೇ ತನ್ನ ಪರ್ಸಿನಲ್ಲಿದ್ದ ಎಟಿಎಂ ಕಾರ್ಡನ್ನು ಹುಡುಕಿದಳು. ಅದು ಆಕೆಯ ಪರ್ಸ್ ನಲ್ಲಿ ಇರಲಿಲ್ಲವಾಗಿ ತಂದೆಗೆ ಹೇಳಿದಳು. ಕೂಡಲೇ ಆಕೆಯ ತಂದೆ "ನೀನು ಕಾಲೇಜಿಗೆ ಹೋಗಬೇಡ ... ಈ ಕೂಡಲೇ ನಾನು ಅಲ್ಲಿಗೆ ಬರುವೆ" ಎಂದು ಹೇಳಿದರು. ಮುಂದಿನ ಒಂದೂವರೆ ಗಂಟೆಯಲ್ಲಿ ಬೈಕ್ ನಲ್ಲಿ ನಗರ ತಲುಪಿದ ಮಗಳ ಅಕೌಂಟ್ ನಿಂದ ಹಣ ತೆಗೆದ ಎಟಿಎಂ ಗೆ ಮಗಳೊಂದಿಗೆ ಬಂದು ತಲುಪಿದರು ಅಮರೇಶ್.

ಆ ಎಟಿಎಂನ ಸಿಬ್ಬಂದಿಗೆ ತಮ್ಮ ಫೋನ್ನಲ್ಲಿ ತಮ್ಮ ಮಗಳ ಖಾತೆಯಿಂದ ಹಣ ತೆಗೆಯಲ್ಪಟ್ಟ ವಿಷಯದ ಕುರಿತ ಮೆಸೇಜ್ ಅನ್ನು ಸೆಕ್ಯೂರಿಟಿಗೆ ತೋರಿಸಿದರು. ಕೂಡಲೇ ತನ್ನ ಮೇಲಧಿಕಾರಿಗಳಿಗೆ ಫೋನಾಯಿಸಿದ ಆ ಸೆಕ್ಯೂರಿಟಿ ಗಾರ್ಡ್ ಸಿ ಸಿ ಟಿವಿ ಕ್ಯಾಮೆರಾದಲ್ಲಿ ಆ ಸಮಯದಲ್ಲಿ ದಾಖಲಾದ ಫೂಟೇಜನ್ನು ವೀಕ್ಷಿಸಲು ಮಗಳ ಬಾಯಿಂದ 'ಅಯ್ಯೋ' ಎಂಬ ಚೀತ್ಕಾರ ಕೇಳಿಸಲು ಆಕೆಯ ತಂದೆಯಾದಿಯಾಗಿ ಎಲ್ಲರೂ ಆಕೆಯತ್ತ ತಿರುಗಿ ನೋಡಿದರು.



ಆಕೆ ನನ್ನ ರೂಮ್ ಮೇಟ್ ಎಂದು ಬಿಕ್ಕಳಿಸತೊಡಗಿದಳು ಕವನ. ಮುಂದಿನ ಎಲ್ಲಾ ಕಾರ್ಯಾಚರಣೆಗಳು ತ್ವರಿತವಾಗಿ ನಡೆದು ಎಲ್ಲರೂ ಹಾಸ್ಟೆಲ್ ಗೆ ತೆರಳಿ ಕವನಳ ರೂಮ್ ಮೇಟ್ ವಿದ್ಯಾರ್ಥಿನಿಯನ್ನು ಕರೆಸಿ ವಿಚಾರಿಸಲಾಗಿ ಮೊದಮೊದಲು ಜೋರಾಗಿ ವಾದ ಮಾಡಿದ ಆಕೆ ಸಿ ಸಿ ಟಿವಿ ಫೂಟೇಜ್ ತೋರಿಸಿದ ನಂತರ ತನ್ನ ತಪ್ಪು ಒಪ್ಪಿಕೊಂಡಳು. ಈ ಮೊದಲೇ ಕವನಳ ಜೊತೆ ಹೊರಗೆ ಹೋಗಿದ್ದಾಗ ಆಕೆಯ ಎಟಿಎಂ ಪಿನ್ ಅನ್ನು ಆಕೆಯ ಅರಿವಿಗೆ ಬಾರದಂತೆ ಗಮನಿಸಿದ್ದ ಕವನಳ ರೂಮ್ ಮೇಟ್ ಸಮಯ ನೋಡಿ ಆಕೆಯ ಪರ್ಸ್ ನಿಂದ ಆಕೆಯ ಎಟಿಎಂ ಕಾರ್ಡನ್ನು ಎತ್ತಿಟ್ಟುಕೊಂಡು ಮರುದಿನ ಮುಂಜಾನೆ ಕಾಲೇಜಿಗೆ ಎಂದಿನಂತೆ ತಯಾರಾಗಿ ಹೊರಟು ಕಾಲೇಜಿಗೆ ಹತ್ತಿರದಲ್ಲಿದ್ದ ಆ ಎಟಿಎಂ ಸೆಂಟರ್ಗೆ ಬಂದು ಹಣ ಡ್ರಾ ಮಾಡಿದ್ದಳು. ಹಾಸ್ಟೆಲ್ ವಾರ್ಡನ್ ಆದಿಯಾಗಿ ಎಲ್ಲರೂ ಆಕೆಗೆ ಛೀಮಾರಿ ಹಾಕಿದರು. ಆದರೆ ಅಮರೇಶ ಮಾತ್ರ ಆಕೆಯ ಮೇಲೆ ಯಾವುದೇ ದೂರನ್ನು ಪೊಲೀಸ್ ಸ್ಟೇಷನ್ ಗೆ ಸಲ್ಲಿಸದೆ ಆಕೆ ಡ್ರಾ ಮಾಡಿದ್ದ ಹಣವನ್ನು ಮಾತ್ರ ಪಡೆದುಕೊಂಡು ಇನ್ನೊಮ್ಮೆ ಈ ರೀತಿ ಮಾಡಬೇಡ ಎಂದು ಎಚ್ಚರಿಸಿದರು.

ಆಗ ಪೊಲೀಸ್ ಅಧಿಕಾರಿಗಳು ದಿನಕ್ಕೆ ಹಲವಾರು ಬಾರಿ ಜಾಹೀರಾತುಗಳ ಮೂಲಕ ಸರ್ಕಾರ ನಿಮ್ಮ ಖಾತೆಯ ನಂಬರ್, ಎಟಿಎಂ ಪೇಟಿಎಂ, ಫೋನ್ ಪೇ ಗಳ ಪಿನ್ ನಂಬರ್ ಯಾರಿಗೂ ಕೊಡಬೇಡಿ ಎಂದು ಯಾವಾಗಲೂ ತಿಳಿ ಹೇಳುತ್ತದೆ ಇನ್ನಾದರೂ ಜಾಗೃತರಾಗಿರಿ ಎಂದು ಹೇಳಿದರು. ಹಾಸ್ಟೆಲ್ನ ವಾರ್ಡನ್ ಕೂಡ ಕವನಳ ಸ್ನೇಹಿತೆಗೆ ಇದೊಂದು ಬಾರಿ ಸುಮ್ಮನಿರುವ ಕಾರಣ ನೀನು ಚಿಕ್ಕವಳು ಎಂದು, ಇದರಿಂದ ನಿನ್ನ ತಂದೆ ತಾಯಿಯರಿಗೆ ಕೆಟ್ಟ ಹೆಸರು ಮತ್ತು ನಿನ್ನ ಭವಿಷ್ಯಕ್ಕೆ ಕಲ್ಲು ಬೀಳುತ್ತದೆ ಎಂದು ತಿಳಿ ಹೇಳಿದರು.



ವೀಣಾ ಹೇಮಂತಗೌಡ ಪಾಟೀಲ್
ಲೇಖಕರು, ಮುಂಡರಗಿ, ಗದಗ

Hampi Times E-paper
SCAN AND READ

ಅಂತೆಯೇ ತಪ್ಪೊಪ್ಪಿಕೊಂಡ ಕವನಳ ರೂಮ್ ಮೇಟ್ ಅಮರೇಶ್ ಮತ್ತು ಕವನಳ ಬಳಿ ಕ್ಷಮೆ ಯಾಚಿಸಿ, ಇನ್ನೆಂದೂ ಇಂತಹ ತಪ್ಪು ಮಾಡುವುದಿಲ್ಲ ಎಂದು ಪ್ರಮಾಣ ಮಾಡಿದಳು.

# ಕೆಟಿಪಿಪಿ ನಿಯಮಗಳನ್ವಯ ಕಾಮಗಾರಿ ಸಾಮಗ್ರಿ ಖರೀದಿಸಿ

## ಜಿಪಂ ಉಪಕಾರ್ಯದರ್ಶಿ ಡಿಎಸ್ ಮಲ್ಲಿಕಾರ್ಜುನ ತೊದಲಬಾಗಿ ಹೇಳಿಕೆ । ಮಾದರಿ ಟೆಂಡರ್ ಡಾಕ್ಯೂಮೆಂಟ್ ತರಬೇತಿ ಕಾರ್ಯಕ್ರಮ

■ **ಹಂಪಿ ಟೈಮ್ಸ್ ಕೊಪ್ಪಳ**

ಮಹಾತ್ಮ ಗಾಂಧಿ ನರೇಗಾ ಯೋಜನೆಯಡಿ ಅನುಷ್ಠಾನಿಸುವ ಕಾಮಗಾರಿಗಳಿಗೆ ಅಗತ್ಯವಿರುವ ಸಾಮಗ್ರಿಗಳನ್ನು ಕೆಟಿಪಿಪಿ ನಿಯಮಗಳನ್ನು ಅನುಸರಿಸಿ ಖರೀದಿಸಲು ಮಾದರಿ ಟೆಂಡರ್ ಡಾಕ್ಯೂಮೆಂಟ್ ತರಬೇತಿಯ ಸದುಪಯೋಗ ಪಡೆದುಕೊಳ್ಳಿ ಎಂದು ಜಿಲ್ಲಾ ಪಂಚಾಯತಿಯ ಉಪಕಾರ್ಯದರ್ಶಿಗಳಾದ ಮಲ್ಲಿಕಾರ್ಜುನ ತೋದಲಬಾಗಿ ಅವರು ಹೇಳಿದರು.

ಮೇ 22 ರಂದು ಜಿಲ್ಲಾ ಪಂಚಾಯತ್‌ನ ಜೆ. ಎಚ್.ಪಟೇಲ್ ಸಭಾಂಗಣದಲ್ಲಿ ಯೋಜನಾ ನಿರ್ದೇಶಕರು, ಇ-ಸಂಗ್ರಹಣಾ ಕೋಶ, ಬೆಂಗಳೂರು ರವರಿಂದ ಆಯೋಜಿಸಲಾಗಿದ್ದ ಕೆಟಿಪಿಪಿ ನಿಯಮಾನುಸಾರ ಮಾದರಿ ಟೆಂಡರ್ ಡಾಕ್ಯೂಮೆಂಟ್ ತರಬೇತಿಯನ್ನು ಉದ್ದೇಶಿಸಿ ಅವರು ಮಾತನಾಡಿದರು.



ಮಹಾತ್ಮ ಗಾಂಧಿ ನರೇಗಾ ಯೋಜನೆಯಡಿ ಅನುಷ್ಠಾನಿಸುವ ಕಾಮಗಾರಿಗಳಿಗೆ ಗ್ರಾಮ ಪಂಚಾಯತಿಗಳಿಂದ ಆಹ್ವಾನಿಸಲಾಗುವ ಟೆಂಡರುಗಳಿಗೆ ಆಯಾ ಪ್ರಾಧಿಕಾರಗಳ ಆರ್ಥಿಕ ಮಿತಿಗಳ ಆಧಾರದಲ್ಲಿ ಆಹ್ವಾನಿಸುವ ಪ್ರಾಧಿಕಾರ, ಪರಿಶೀಲನಾ ಪ್ರಾಧಿಕಾರ, ಅನುಮೋದಿಸುವ ಪ್ರಾಧಿಕಾರ ಹಾಗೂ ಮೇಲ್ಮನವಿ ಪ್ರಾಧಿಕಾರಗಳನ್ನು ನೇಮಿಸಬೇಕು ಎಂದು ಅವರು ತರಬೇತಿ ಅಂಶಗಳ ಕುರಿತು ತಿಳಿಸಿದರು.

ತರಬೇತಿಯ ರಾಜ್ಯ ಸಂಪನ್ಮೂಲ ವ್ಯಕ್ತಿಗಳಾದ ದಾದಾಪೀರ್ ರವರು ಮಹಾತ್ಮ ಗಾಂಧಿ ನರೇಗಾ ಯೋಜನೆಯ ಅನುಷ್ಠಾನಕ್ಕಾಗಿ ರೂ. 5.00 ಲಕ್ಷ ಮೀರಿದ ಸರಕು ಸಾಮಾಗ್ರಿಗಳನ್ನು ಖರೀದಿಸಲು ಕೆಟಿಪಿಪಿ ನಿಯಮದಂತೆ ಕ್ರಮವಹಿಸುವುದು ಕಡ್ಡಾಯವಾಗಿರುವುದರಿಂದ ಟೆಂಡರ್ ಅನ್ನು ಆಹ್ವಾನಿಸಿ ಟೆಂಡರ್ ಪ್ರಕ್ರಿಯೆ ಕೈಗೊಳ್ಳುವ ಕುರಿತು ವಿವರವಾಗಿ ತರಬೇತಿಯನ್ನು ನೀಡಿದರು.

ತರಬೇತಿಯಲ್ಲಿ ಜಿಲ್ಲೆಯ ಎಲ್ಲಾ ಸಹಾಯಕ ನಿರ್ದೇಶಕರು (ಗ್ರಾಉ), ಆಯ್ದ ಗ್ರಾಮ ಪಂಚಾಯತಿಗಳ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು, ADPC DIEC ತಾಂತ್ರಿಕ ಸಂಯೋಜಕರು, ತಾಂತ್ರಿಕ ಸಹಾಯಕರು, ತಾಲೂಕು ಎಂಐಎಸ್ ಸಂಯೋಜಕರು ಹಾಜರಿದ್ದರು.

• Admissions
• Requirements
• Firm Branding
• Public Notice
• Change of Name

BOOK NOW!

Booking Open for Your Advertisements in Leading Local, State & National News Papers
9482599089 / 9448633038

• Obituary
• Remembrance
• Birthday wish ads
• Events Display &
• Classified ads

SHUBHA Ads C/o HAMPI TIMES, Bamboo Bazaar, Nr Valmiki Circle, Hosapete-583201 Vijayanagara Dist.

## ನಿತ್ಯ ಪಂಚಾಂಗ

ಮಾಸ: ವೈಶಾಖ । ಸಂವತ್ಸರ: ಕ್ರೋಧಿ

**26–05–2024 – ಭಾನುವಾರ**

| | |
|---|---|
| ತಿಥಿ | : ತೃತೀಯ |
| ಪಕ್ಷ | : ಕೃಷ್ಣ |
| ನಕ್ಷತ್ರ | : ಮೂಲ |
| ಯೋಗ | : ಸಾಧ್ಯ |
| ಕರಣ | : ವಾಣಿಜ |
| ಸೂರ್ಯೋದಯ | : 05:43:12 |
| ಸೂರ್ಯಾಸ್ತ | : 19:05:05 |
| ರಾಹು | : 04:30–06:00 |
| ಯಮಘಂಡ | : 12:00–13:30 |
| ಗುಳಿಕ | : 03:00–04:30 |

## ತುಂಗಭದ್ರಾ ನೀರಿನ ಮಟ್ಟ



**ಶನಿವಾರ : 25–05–2024**

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1577.45 ಅಡಿ |
| ಒಳ ಹರಿವು | 00 ಕ್ಯುಸೆಕ್ |
| ಹೊರ ಹರಿವು | 12 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 3.357 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| ಕಳೆದ ವರ್ಷ ಇದೇ ದಿನ | |
| ಇಂದಿನ ಮಟ್ಟ | 1579.43 ಅಡಿ |
| ಒಳ ಹರಿವು | 1035 ಕ್ಯುಸೆಕ್ |
| ಹೊರ ಹರಿವು | 244 ಕ್ಯುಸೆಕ್ |
| ಸಾಮರ್ಥ್ಯ | 4.200 ಟಿಎಂಸಿ |

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಕನ್ನಡ ದಿನ ಪತ್ರಿಕೆ
HAMPI TIMES VIJAYANAGARA
Join for vijayanagara dist. updates

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
e-paper
REACH EVERY WHERE NO BORDER




9448633038
www.hampitimes.com

# ಹಂಪಿಯತ್ತ ಪ್ರವಾಸಿಗರ ಹೆಜ್ಜೆ

## ವರುಣಾಗಮನದ ನಂತರ ಗರಿಗೆದರಿದ ಪ್ರವಾಸೋದ್ಯಮ







■ **ಹಂಪಿ ಟೈಮ್ಸ್ ಹೊಸಪೇಟೆ**

ವರುಣನ ಆಗಮನಿಂದ ಧರೆ ತಂಪಾಗಿದೆ. ತಾಪಮಾನ ತಗ್ಗಿದ್ದರಿಂದ ಬೇಸಿಗೆಗೆ ತತ್ತರಿಸಿದ್ದ ಮನಸುಗಳು ಸುಂದರ ಪರಿಸರದತ್ತ ಹೆಜ್ಜೆ ಹಾಕಲು ಮನಸ್ಸು ಮಾಡಿವೆ. ಬೇಸಿಗೆ ರಜೆಯ ಕೊನೆ ವಾರದ ದಿನವಾದ ಶನಿವಾರ ನಾಡಿನ ವಿವಿಧೆಡೆಗಳಿಂದ ನಿಸರ್ಗದತ್ತ ಹಂಪಿಯ ಸೊಬಗು ಮತ್ತು ಐತಿಹಾಸಿಕ ಸ್ಮಾರಕಗಳನ್ನು ಕಣ್ತುಂಬಿಕೊಳ್ಳಲು ಪ್ರವಾಸಿಗರು ಹಂಪಿಯತ್ತ ಮುಖಮಾಡಿದ್ದರಿಂದ ಹಂಪಿಯ ಜನರಲ್ಲೂ ಸಂಭ್ರಮ ಮನೆಮಾಡಿದೆ.

ಬೇಸಿಗೆ ಬಿಸಿಲಿನ ತಾಪಮಾನಕ್ಕೆ ಪ್ರವಾಸಿಗಿರಿಲ್ಲದೆ ಹಂಪಿ ಬಿಕೋ ಎನ್ನುತ್ತಿತ್ತು. ಪ್ರವಾಸೋದ್ಯಮವನ್ನೆ ನಂಬಿ ಜೀವನ ಕಟ್ಟಿಕೊಂಡವರ ಸಾಮಾನ್ಯ ಜನರ ಬದುಕು ಚಿಂತಾಜನಕವಾಗಿತ್ತು. ಇದೀಗ ಪ್ರವಾಸಿಗರ ಸಂಖ್ಯೆ ಹೆಚ್ಚುತ್ತಿರುವುದರಿಂದ ಬೀದಿಬದಿ ವ್ಯಾಪಾರಿಗಳು, ವಸತಿ ನಿಲಯಗಳು, ಲಾಡ್ಜಿಂಗ್, ಸಾರಿಗೆ ಸೇರಿದಂತೆ ಮಾರ್ಗದರ್ಶಕರೂ ಪ್ರವಾಸಿಗರೊಂದಿಗೆ ಬಿಜಿಯಾಗಿದ್ದು, ಬದುಕಿನ ಆರ್ಥಿಕ ಹೊರೆಯನ್ನು ತಕ್ಕಮಟ್ಟಿಗೆ ತಗ್ಗಿಸುತ್ತಿದೆ ಎಂದು ಪ್ರವಾಸಿ ಮಾರ್ಗದರ್ಶಿಗಳಾದ ವಿರೂಪಾಕ್ಷಿ ವಿ ಹಂಪಿ , ಗೋಪಾಲ ತಿಳಿಸಿದ್ದಾರೆ.

## ಧರ್ಮಸ್ಥಳ ಶ್ರೀ ಮಂಜುನಾಥಸ್ವಾಮಿ ದರ್ಶನ ಪಡೆದ ಸಿಎಂ, ಡಿಸಿಎಂ





ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಶ್ರೀ ಕ್ಷೇತ್ರ ಧರ್ಮಸ್ಥಳಕ್ಕೆ ಭೇಟಿ ನೀಡಿ ಶ್ರೀ ಮಂಜುನಾಥೇಶ್ವರ ಸ್ವಾಮಿಯ ದರ್ಶನ ಪಡೆದು ವಿಶೇಷ ಪೂಜೆ ಸಲ್ಲಿಸಿ ಸನ್ನಿಧಿಯಲ್ಲಿ ಪ್ರಸಾದ ಸ್ವೀಕರಿಸಿದರು. ಡಿಸಿಎಂ ಡಿ.ಕೆ.ಶಿವಕುಮಾರ್, ಸಚಿವರಾದ ಹೆಚ್.ಸಿ.ಮಹದೇವಪ್ಪ, ಬೈರತಿ ಸುರೇಶ್, ಕೆ.ವೆಂಕಟೇಶ್, ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿ ಗೋವಿಂದರಾಜು, ಮಾಜಿ ಸಚಿವ ರಮಾನಾಥ ರೈ, ಕೆಪಿಸಿಸಿ ಕಾರ್ಯಾಧ್ಯಕ್ಷರಾದ ಮಂಜುನಾಥ ಭಂಡಾರಿ ಸೇರಿ ಹಲವು ಪ್ರಮುಖರು ಉಪಸ್ಥಿತರಿದ್ದರು.

# ವಿಜ್ಞಾನ

## ಹಲ್ಲಿ ಏಕೆ ಗೋಡೆಯಿಂದ ಬೀಳಲ್ಲ?

■ ಆರ್.ಬಿ.ಗುರುಬಸವರಾಜ

ಗೋಡೆಯ ಮೇಲಿದ್ದ ಎರಡು ಹಲ್ಲಿಗಳು ಪರಸ್ಪರ ಜಗಳ ಆಡುವುದನ್ನೇ ನೋಡುತ್ತ ಕುಳಿತಿದ್ದ ಉಬೇದನು "ಪಪ್ಪಾ, ಹಲ್ಲಿಗಳು ಏಕೆ ಗೋಡೆಯಿಂದ ಬೀಳುವುದಿಲ್ಲ?" ಎಂದ. ಅದಕ್ಕೆ ತಂದೆ ಪುಸ್ತಕ ಹುಡುಕಿ ಉತ್ತರ ಹೇಳಿದರು. ಪ್ರತಿ ಮನೆಯ ವಿಶೇಷ ಅತಿಥಿ ಎಂದರೆ ಹಲ್ಲಿ. ಹಲ್ಲಿ ಇಲ್ಲದ ಮನೆ ಇಲ್ಲ ಎನ್ನಬಹುದು. ನುಣುಪಾಗಿರುವ ಮನೆಯ ಗೋಡೆ, ಕಂಬಗಳನ್ನು ಹಲ್ಲಿ ಸರಸರನೇ ಏರುತ್ತದೆ. ಅಂತೆಯೇ ಮೇಲ್ಛಾವಣಿಗೆ ತಲೆಕೆಳಗಾಗಿ ಅಂಟಿಕೊಂಡಿರುತ್ತದೆ. ಆದರೂ ಅದು ಬೀಳುವುದಿಲ್ಲ. ಹಲ್ಲಿಗಳು ತಮ್ಮ ವಿಶಿಷ್ಟ ಭೌತಿಕ ರೂಪಾಂತರಗಳಿಂದಾಗಿ ಗೋಡೆಗಳಂತಹ ಲಂಬವಾದ ಮೇಲ್ಮೈಗಳ ಮೇಲೆ ಏರಲು ಮತ್ತು ಅಂಟಿಕೊಳ್ಳಲು ಸಾಧ್ಯವಾಗುತ್ತದೆ.



ಹಲ್ಲಿಗಳು ಗೋಡೆಗಳನ್ನು ಏರಲು ಸಾಧ್ಯವಾಗುವ ಪ್ರಮುಖ ರೂಪಾಂತರಗಳಲ್ಲಿ ಒಂದಾಗಿದೆ. ಹೀಗೆ ಹಲ್ಲಿಗಳು ಸುಲಭವಾಗಿ ಏರಲು ಸಹಾಯ ಮಾಡುವ ಅಂಶವೆಂದರೆ ಅವುಗಳ ಕಾಲುಗಳಲ್ಲಿನ ವಿಶೇ?ವಾದ ಟೋ ಪ್ಯಾಡ್‌ಗಳು. ಹಲ್ಲಿಯ ಟೋ ಪ್ಯಾಡ್‌ಗಳು ಲಕ್ಷಾಂತರ ಸಣ್ಣ ಸಣ್ಣ ಸೆಟ್ಟೇ ಅಥವಾ ಸ್ಪಾಟುಲೇ ಎಂದು ಕರೆಯಲ್ಪಡುವ ಕೂದಲಿನಂತಹ ರಚನೆಗಳನ್ನು ಹೊಂದಿವೆ. ಇದು ವ್ಯಾನ್ ಡೆರ್ ವಾಲ್ಸ್ ಫೋರ್ಸ್ ಎಂದು ಕರೆಯಲ್ಪಡುವ ದುರ್ಬಲ ಆಣ್ವಿಕ ಶಕ್ತಿಗಳ ಮೂಲಕ ಮೇಲ್ಮೈಗೆ ಅಂಟಿಕೊಳ್ಳುವಂತೆ ಮಾಡುತ್ತದೆ. ಹಲ್ಲಿಯ ಪಾದಗಳ ಮೇಲಿನ ಅಣುಗಳು ಮತ್ತು ಗೋಡೆಯ ಮೇಲಿನ ಅಣುಗಳ ನಡುವಿನ ಆಕರ್?ಣೆಯಿಂದ ಈ ಶಕ್ತಿಗಳು ಉದ್ಭವಿಸುತ್ತವೆ. ಹಲ್ಲಿಯ ಪಾದಗಳು ಮತ್ತು ಗೋಡೆಯ ನಡುವೆ ಹೆಚ್ಚು ಸಂಪರ್ಕ ಬಿಂದುಗಳಿವೆ. ವ್ಯಾನ್ ಡೆರ್ ವಾಲ್ಸ್ ಬಲವು ಹಲ್ಲಿ ಮೇಲ್ಮೈಗೆ ಅಂಟಿಕೊಳ್ಳುವಂತೆ ಮಾಡುತ್ತದೆ.

ಅಂತೆಯೆ ಹಲ್ಲಿಗಳು ತಮ್ಮ ಕಾಲುಗಳಲ್ಲಿ ಬಲವಾದ ಸ್ನಾಯುಗಳನ್ನು ಹೊಂದಿವೆ. ಈ ಸ್ನಾಯುಗಳು ಮೇಲ್ಮೈಗಳನ್ನು ಬಿಗಿಯಾಗಿ ಹಿಡಿಯಲು ಅನುವು ಮಾಡಿಕೊಡುತ್ತವೆ. ಹಲ್ಲಿಗಳು ನುರಿತ ಆರೋಹಿಗಳು ಮತ್ತು ಸಮತೋಲನದ ಉತ್ತಮ ಅರ್ಥವನ್ನು ಹೊಂದಿವೆ. ಏರುವಾಗ ದೇಹದ ಸಮತೋಲನ ಕಾಪಾಡಿಕೊಳ್ಳಲು ಉದ್ದನೆಯ ಬಾಲ ಸಹಾಯ ಮಾಡುತ್ತದೆ. ವಿಶೇ?ವಾದ ಟೋ ಪ್ಯಾಡ್‌ಗಳು ಮತ್ತು ನೈಸರ್ಗಿಕ ಸಮತೋಲನದ ಈ ಸಂಯೋಜನೆಯು ಹಲ್ಲಿಗಳು ಗೋಡೆಗಳು ಮತ್ತು ಇತರ ಲಂಬ ಮೇಲ್ಮೈಗಳಿಂದ ಬೀಳುವುದನ್ನು ತಪ್ಪಿಸಲು ಸಹಾಯ ಮಾಡುತ್ತದೆ.

# ಶಿಕ್ಷಣ ಪಡೆದ ನಂತರ ಹೆತ್ತವರ ಮರಿಬೇಡಿ

## ಗವಿಮಠದ ಡಾ ಹಿರಿಶಾಂತವೀರ ಮಹಾಸ್ವಾಮಿಗಳ ಹೇಳಿಕೆ

■ **ಹಂಪಿ ಟೈಮ್ಸ್ ಹೂವಿನ ಹಡಗಲಿ**

ಪಠ್ಯದ ಕಲಿಕೆಯ ಜೊತೆಗೆ ಮಕ್ಕಳಲ್ಲಿ ಮಾನವೀಯ ಮೌಲ್ಯಗಳನ್ನು ಬೆಳೆಸಬೇಕು ಎಂದು ಗವಿಮಠದ ಡಾ ಹಿರಿಶಾಂತವೀರ ಮಹಾಸ್ವಾಮಿಗಳು ಹೇಳಿದರು.

ಪಟ್ಟಣದ ಜ್ಞಾನಗಂಗಾ ಪ್ರೌಢಶಾಲೆಯಲ್ಲಿ ಶುಕ್ರವಾರ ಜ್ಞಾನ ಬೆಳಕು ಅಕಾಡೆಮಿ ವತಿಯಿಂದ ಆಯೋಜಿಸಿದ್ದ 2024 ಶೈಕ್ಷಣಿಕ ಸಾಲಿನ ಬೇಸಿಗೆ ಶಿಬಿರದ ಸಮಾರೋಪ ಸಮಾರಂಭದಲ್ಲಿ ಅವರು ಆಶೀರ್ವಚನ ನೀಡಿ ಮಾತನಾಡಿದರು. ಯುವಕರು ಮೊಬೈಲ್ ಸಾಮಾಜಿಕ ಜಾಲತಾಣ ಗಳಲ್ಲಿ ಅತೀ ಹೆಚ್ಚು ಕಾಲ ಕಳೆಯುತ್ತಿರುವುದಿರಿಂದ ಸೃಜನ ಶೀಲತೆಗೆ ಹಿನ್ನಡೆ ಆಗಿದೆ. ಅವಶ್ಯಕತೆ ಇದ್ದಾಗ ಮಾತ್ರ ಮೊಬೈಲ್ ಟಿ ವಿ ಬಳಸುವಂತೆ ಕಿವಿಮಾತು ಹೇಳಿದರು.

ಸ್ಪರ್ಧಾತ್ಮಕ ಯುಗದಲ್ಲಿ ಹೆಚ್ಚು ಅಂಕ ಗಳಿಸುವುದು ಅಗತ್ಯ. ಉನ್ನತ ಶಿಕ್ಷಣ ಪಡೆದ ನಂತರ ಹೆತ್ತವರನ್ನು ಮರೆಯದೆ ಅವರೊಂದಿಗೆ ಬದುಕುವ ಸಂಕಲ್ಪ ಮಾಡಬೇಕು ಎಂದು ಹೇಳಿದರು.



ಮುಖ್ಯ ಗುರುಗಳಾದ ಸುರೇಶ ಅಂಗಡಿ ಎಸ್ಸೆಸ್ಸೆಲ್ಸಿ ಪಿಯುಸಿ ಪರೀಕ್ಷೆಯಲ್ಲಿ ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳೇ ಹೆಚ್ಚು ಸಾಧನೆ ಮಾಡಿದ್ದಾರೆ. ಹೆಚ್ಚು ಅಂಕ ಗಳಿಸಲು ಪಠ್ಯ ಪುಸ್ತಕಗಳ ನಿರಂತರ ಓದು ಅತ್ಯವಶ್ಯಕ. ವಿಜ್ಞಾನಿಗಳ ದಾರ್ಶನಿಕರ ಸಂತರ ಕವಿಗಳ ಸ್ವಾತಂತ್ರ್ಯ ಹೋರಾಟಗಾರರ ಬದುಕು ಆದರ್ಶವಾಗಬೇಕು ಎಂದರು.

ಅಕಾಡೆಮಿಯ ವಿಜಯ್ ಅಧ್ಯಕ್ಷತೆ ವಹಿಸಿದ್ದರು. ಶಿಕ್ಷಕರಾದ ವಿಶ್ವನಾಥ್, ಉಮೇಶ್ ಸೊಪ್ಪಿನ, ಲೋಕೇಶ್, ಅಶ್ವಿನಿ ಇತರರು ಉಪಸ್ಥಿತರಿದ್ದರು. ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಪಡೆದ ಅಕಾಡೆಮಿಯ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಗೌರವ ಸನ್ಮಾನ ನೆರವೇರಿಸಲಾಯಿತು. ರಸಪ್ರಶ್ನೆ, ಕಿರು ಪರೀಕ್ಷೆ, ಆಟೋಟಗಳಲ್ಲಿ ವಿಜೇತರಾದವರಿಗೆ ಬಹುಮಾನ ವಿತರಿಸಲಾಯಿತು.

# ಜಿಟಿಟಿಸಿ ಡಿಪ್ಲೋಮ ಕೋರ್ಸಿಗಾಗಿ ಅರ್ಜಿ ಆಹ್ವಾನ



■ **ಹಂಪಿ ಟೈಮ್ಸ್ ಮರಿಯಮ್ಮನಹಳ್ಳಿ:**

ಪಟ್ಟಣದ ಸರಕಾರಿ ಜಿ.ಟಿ.ಟಿ.ಸಿ.ಕಾಲೇಜ್ ನಲ್ಲಿ ಎಸ್.ಎಸ್.ಎಲ್.ಸಿ. ಮುಗಿಸಿದ ವಿದ್ಯಾರ್ಥಿಗಳಿಗೆ ತರಬೇತಿ ಕೋರ್ಸುಗಳಿಗೆ ಅರ್ಜಿ ಆಹ್ವಾನಿಸಲಾಗಿದೆ ಎಂದು ಪ್ರಾಚಾರ್ಯ ಡಿ.ಅಂಜನ್ ಕುಮಾರ್ ತಿಳಿಸಿದ್ದಾರೆ.

ಅವರು ಪಟ್ಟಣದ ಜಿಟಿಟಿಸಿ ಕಾಲೇಜ್ ನಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಜಿಟಿಟಿಸಿಗೆ ರಾಜ್ಯ, ರಾಷ್ಟ್ರ ಮಟ್ಟದ ತಾಂತ್ರಿಕ ಕ್ಷೇತ್ರದಲ್ಲಿ ಪರಿಣಿತಿ ಹೊಂದಿದ್ದು ಜಾಗತಿಕ ಮಟ್ಟದಲ್ಲಿ ಪ್ರಶಂಸೆಗೆ ಒಳಪಟ್ಟ ಸಂಸ್ಥೆಯಾಗಿದ್ದು ಅನೇಕ ವರ್ಷಗಳಿಂದ ಉನ್ನತ ಗುಣಮಟ್ಟದ ತರಬೇತಿಯನ್ನು ನೀಡುತ್ತಾ ಸಹಸ್ರಾರು ಯುವಕ ಯುವತಿಯರಿಗೆ ಉದ್ಯೋಗ ಒದಗಿಸುತ್ತಾ ಬಂದಿದೆ. ಕೈಗಾರಿಕಾ ರಂಗಕ್ಕೆ ಅಗತ್ಯವಾದ ನುರಿತ ಮಾನವ ಸಂಪನ್ಮೂಲಗಳನ್ನು ಒದಗಿಸಲು ಸಶಕ್ತವಾಗಿದೆ.

ಹೊಸದಾಗಿ ನಿರ್ಮಿಸಿದ ಭವ್ಯವಾದ ಕಟ್ಟಡಗಳಲ್ಲಿ ಎಲ್ಲಾ ಅಗತ್ಯ ಮಿಷನರಿಗಳು ಮತ್ತು ನುರಿತ ಪ್ರಾಧ್ಯಾಪಕರು ಇದ್ದು ಉತ್ತಮ ತಾಂತ್ರಿಕ ಶಿಕ್ಷಣ ತರಬೇತಿ ನೀಡಲಾಗುತ್ತಿದೆ. 2023–24ನೇ ಸಾಲಿನಲ್ಲಿ ಡಿಪ್ಲೋಮಾ ಇನ್ ಟೂಲ್ ಮೇಕಿಂಗ್ ಅಂಡ್ ಡೈ ಮೇಕಿಂಗ್ ಜೊತೆಗೆ ಈಬಾರಿ ಎ.ಐಸಿ.ಟಿ.ಈ.ದೆಹಲಿಯಿಂದ ಅನುಮೋದನೆ ಪಡೆದು, ಹೊಸದಾಗಿ ಡಿಪ್ಲೋಮ ಇನ್ ಮೆಕಟ್ರಾನಿಕ್ಸ್ ಹಾಗು ಡಿಪ್ಲೋಮ ಇನ್ ಎಲೆಕ್ಟ್ರಾನಿಕ್ಸ್ ಅಂಡ್ ಎಲೆಕ್ಟ್ರಿಕಲ್ಸ್ ಕೋರ್ಸಿಗಾಗಿ ಅರ್ಜಿ ಆಹ್ವಾನಿಸಲಾಗಿದೆ.

ಸದರಿ ಕೋರ್ಸಿಗೆ ಎಸ್.ಎಸ್.ಎಲ್.ಸಿ ಪಾಸಾದ ವಿದ್ಯಾರ್ಥಿಗಳಿಗಳು ಆನ್ ಲೈನ್ ಮೂಲಕ ಅರ್ಜಿಸಲ್ಲಿಸಿ ಪ್ರವೇಶ ಪಡೆಯಬಹುದಾಗಿದೆ.

ಒಟ್ಟು 4. ವರ್ಷಗಳ ಅವಧಿಯ ಕೋರ್ಸು ಇದಾಗಿದೆ.ಜೂನ್ 6 ರೊಳಗೆ ಕೆ.ಈ.ಎ.ಮೂಲಕ ಆನ್ ಲೈನ್ ನಲ್ಲಿ ಅರ್ಜಿ ಸಲ್ಲಿಸಬಹುದಾಗಿದೆ. ಎಸ್.ಎಸ್.ಎಲ್.ಸಿ. ಮುಗಿಸಿದ ವಿದ್ಯಾರ್ಥಿಗಳು ಇದರ ಸದುಪಯೋಗಪಡೆದು ಕೊಳ್ಳ ಬಹುದಾಗಿದೆ. ಅಲ್ಲದೇ ಕರ್ನಾಟಕ ಸರ್ಕಾರದ ಮುಖ್ಯಮಂತ್ರಿ ಕೌಶಲ್ಯ ಕರ್ನಾಟಕ ಯೋಜನೆ ಅಡಿಯಲ್ಲಿ ಎಸ್.ಎಸ್.ಎಲ್.ಸಿ. ಪಾಸಾದ ಯುವಕ– ಯುವತಿಯರಿಗೆ,ಎಂಜಿನಿಯರ್ ವಿದ್ಯಾರ್ಥಿಗಳಿಗೆ ತರಬೇತಿಗಳನ್ನು ನೀಡಲಾಗುವುದು ಎಂದರು.ಈ ಸಂಧರ್ಭದಲ್ಲಿ ಪ್ರಾಧ್ಯಾಪಕರಾದ ಜಿ. ರಾಜೇಶ್,ಎಂ.ಗಣೇಶ್,ಜಿ.ಮಹೇಶ್ ಉಪಸ್ಥಿತರಿದ್ದರು.

## ಜಿಲ್ಲಾ ಕಾರಾಗೃಹದಲ್ಲಿ ವಿಶ್ವ ಸ್ಕಿಜೋಫ್ರೇನಿಯಾ ದಿನಾಚರಣೆ

**ಹಂಪಿ ಟೈಮ್ಸ್ ಕೊಪ್ಪಳ**

ಜಿಲ್ಲಾ ಕಾರಾಗೃಹ ಹಾಗೂ ಜಿಲ್ಲಾ ಆರೋಗ್ಯ ಕುಟುಂಬ ಕಲ್ಯಾಣ ಇಲಾಖೆ ಕೊಪ್ಪಳ ಸಹಯೋಗದಲ್ಲಿ ಮೇ 24 ರಂದು ವಿಶ್ವ ಸ್ಕಿಜೋಫ್ರೇನಿಯಾ ದಿನದ ಅಂಗವಾಗಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದ ಡಾ॥ ಮಹೇಶ ಹಾಗೂ ಡಾ॥ ಯುವರಾಜ ರವರು ಸ್ಕಿಜೋಫ್ರೇನಿಯಾದ ಲಕ್ಷಣಗಳು ಹಾಗೂ ಪರಿಣಾಮಗಳು ಮತ್ತು ಈ ಮಾನಸಿಕ ಖಾಯಿಲೆಯಿಂದ ಹೊರಬರುವ ಬಗ್ಗೆ ಸವಿಸ್ತಾರವಾಗಿ ತಿಳಿಸಿದರು.

ಕಾರ್ಯಕ್ರಮದಲ್ಲಿ ಕಾರಾಗೃಹದ ಅಧೀಕ್ಷಕರಾದ ವಿಜಯಕುಮಾರ ಡಿ. ಚವ್ಹಾಣ, ಜಿಲ್ಲಾ ಆಸ್ಪತ್ರೆಯ ಸಿಬ್ಬಂದಿಗಳು ಹಾಗೂ ಕಾರಾಗೃಹದ ಸಿಬ್ಬಂದಿಗಳು ಉಪಸ್ಥಿತರಿದ್ದರು.

# ಗೈರಾದವರಿಗೆ ಕೂಲಿ ಪಾವತಿಸಿದರೆ ಕ್ರಮ

**ಮೊದಲ ಪುಟದಿಂದ**

ನಮೂದಿಸುವಂತೆ ಸೂಚಿಸಿ ಇನ್ನು ಮುಂದೆ ಹೀಗಾಗದಂತೆ ಕೆಲಸ ನಿರ್ವಹಿಸುವಂತೆ ಮೇಟಿಗೆ ಎಚ್ಚರಿಕೆ ನೀಡಿದರು, ನಂತರ ಕಾರ್ಯನಿರತ ಸ್ಥಳದಲ್ಲಿ ಕುಡಿಯುವ ನೀರು ಸಹಿತ ಮೂಲಭೂತ ಸೌಕರ್ಯಗಳನ್ನು ಒದಗಿಸುತ್ತಿರುವುದರ ಬಗ್ಗೆ ಕೂಲಿಕಾರ್ಮಿಕರಿಂದ ಮಾಹಿತಿ ಪಡೆದುಕೊಂಡರು. ನರೇಗಾ ಯೋಜನೆಯಡಿ ರಾಯರಾಳು ತಾಂಡದಲ್ಲಿ ನಿರ್ಮಿಸಲಾದ ಅಮೃತ ಸರೋವರ ನಿನ್ನೆ ರಾತ್ರಿ ಸುರಿದ ಮಳೆಯಿಂದ ತುಂಬಿರುವುದನ್ನು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ವೀಕ್ಷಿಸಿ ಸ್ಥಳಿದಲ್ಲಿ ಹಾಜರಿದ್ದ ಗ್ರಾಮಪಂಚಾಯಿತಿ ಅಧ್ಯಕ್ಷರೊಂದಿಗೆ ಚರ್ಚಿಸಿ ಅಮೃತ ಸರೋವರದ ದಡದಲ್ಲಿ ಸಾರ್ವಜನಿಕರು ನೀರಿಗಿಳಿಯದಂತೆ ಎಚ್ಚರಿಕೆಯ ಫಲಕ ಹಾಕಲು ತಿಳಿಸಿದರು. ನಂತರ ಆನೇಕಲ್ ಗ್ರಾಮದ ಶಾಲಾ ಕಾಂಪೌಂಡ್, ಶಾಲಾ ಶೌಚಾಲಯ ಕಾಮಗಾರಿ, ಮಾದೂರು ಗ್ರಾಮದ ರೈತ ಟಿ ಮಾಲೋಜಪ್ಪ ಅವರ ಕಣದಲ್ಲಿ ಸುಮಾರು 57000 ಗಳ ವೆಚ್ಚದಲ್ಲಿ ನಿರ್ಮಿಸಲಾದ ದನದ ಕೊಟ್ಟಿಗೆಯನ್ನು ಮೆಚ್ಚುಗೆ ವ್ಯಕ್ತಪಡಿಸಿದರಿ ಹಾಗು ಅದೇ ಗ್ರಾಮದಲ್ಲಿನ ಸಂಜೀವಿನಿ ಎನ್ ಆರ್ ಎಲ್ ಎಂ ಕಟ್ಟಡ ನಿರ್ಮಾಣದ ಕಾಮಗಾರಿಯ ಪ್ರಗತಿಯನ್ನು ವೀಕ್ಷಿಸಿ ಸ್ಥಳದಲ್ಲಿಯೇ ಕಡತ ತರಿಸಿಕೊಂಡು ಪರಿಶೀಲನೆ ಮಾಡಿದರು.

ನಂತರ ದಶಮಾಪುರ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿನ ದಶಮಾಪುರ ಗ್ರಾಮಕ್ಕೆ ತೆರಳಿ ಗ್ರಾಮದಲ್ಲಿ ನಿರ್ಮಿಸಲಾದ ಎನ್ ಆರ್ ಎಲ್ ಎಂ ಸಂಜೀವಿನಿ ಕಟ್ಟಡ, ಜೆಜೆಎಂ ಯೋಜನೆಯಡಿ ನಿರ್ಮಿಸಿರುವ ಮೇಲ್ಮಟ್ಟದ ಜಲಗಾರ, ಹೊಸಕೆರೆ ಗ್ರಾಮದಲ್ಲಿನ ಬೂದು ನೀರು ನಿರ್ವಹಣಾ ನಿರ್ಮಾಣ ಕಾಮಗಾರಿ, ಹಿರಿಯ ಪ್ರಾಥಮಿಕ ಶಾಲೆಯಲ್ಲಿನ ಹೈಟೆಕ್ ಶೌಚಾಲಯ, ಶಾಲಾ ಕಾಂಪೌಂಡ್ ಕಾಮಗಾರಿಗಳನ್ನು ವೀಕ್ಷಿಸಿದರು.

ಈ ಕ್ಷೇತ್ರ ಬೇಟಿಯ ಸಂದರ್ಭದಲ್ಲಿ ತಾಲೂಕು ಪಂಚಾಯಿತಿಯ ಕಾರ್ಯನಿರ್ವಾಹಕ ಅಧಿಕಾರಿ ಜಿ ಪರಮೇಶ್ವರ್, ಸಹಾಯಕ ನಿರ್ದೇಶಕರು (ನರೇಗಾ) ರಮೇಶ್ ಮಹಾಲಿಂಗಪುರ , ಪಿಡಿಓ ನವೀನ್ ಕುಮಾರ್ ಆರ್ ಡಿ, ತಾಂತ್ರಿಕ ಸಂಯೋಜಕ ದೇವೇಂದ್ರನಾಯ್ಕ, ತಾಂತ್ರಿಕ ಸಹಾಯಕರಾದ ನಾಗಭೂಷಣ, ಚಂದ್ರಶೇಖರ, ಬಿ ಎಫ್ ಟಿ ಗಳಾದ ಮೈಲಪ್ಪ ಮತ್ತು ಕೊಟ್ರೇಶ್ ಇದ್ದರು.

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA